ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಅಮೇರಿಕಾದ ಸಾಮುಯೆಲ್ ಸೆವಿಯನ್ ಜೊತೆ ಸುಲಭವಾಗಿ ಡ್ರಾ ಸಾಧಿಸಿದರು.

12 ಆಗಸ್ಟ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -152 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತದ ಅಣುಯುಗದ ಶಿಲ್ಪಿ ಹೋಮಿ ಭಾಭಾ » 2



ದೇವಾಲಯದ ಸುತ್ತ ಮುತ್ತಲಿನ ಅಂಗಡಿ ತೆರವುಗೊಳಿಸಿ » 3




ನಕಲಿ ಬಿಲ್ ಮಾಡುವವರನ್ನು ಬಡಿದು ಹಾಕುವೆ » 4

# ಕಾವೇರಿ ನೀರು ಹಂಚಿಕೆ: ಕರ್ನಾಟಕಕ್ಕೆ ಮತ್ತೆ ಹಿನ್ನಡೆ

• ಪ್ರಜೋದಯ ವರದಿ

**ನವದೆಹಲಿ:** ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮತ್ತೆ ಹಿನ್ನಡೆಯಾಗಿದೆ. ರಾಜ್ಯ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 12,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಕಾವೇರಿ ನಿರ್ವಹಣಾ ಪ್ರಾಧಿಕಾರ ಎತ್ತಿಹಿಡಿದಿದೆ.

ಮಂಗಳವಾರ ದೆಹಲಿಯಲ್ಲಿ ಸಿಡಬ್ಲ್ಯೂಆರ್‌ಸಿ ಮುಖ್ಯಸ್ಥ ವಿನೀತ್ ಗುಪ್ತಾ ಅವರ ನೇತೃತ್ವದಲ್ಲಿ ನಡೆದ 140ನೇ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ ಆದೇಶದಿಂದಾಗಿ ಕರ್ನಾಟಕವು ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಅಂದಾಜು ಬರೋಬ್ಬರಿ 16 ಟಿಎಂಸಿ ನೀರನ್ನು ಹರಿಸಬೇಕಾಗಿದೆ.

ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಮೇಲ್ಮನವಿ ಸಲ್ಲಿಸಿತ್ತು. ಆದರೆ, ಸಿಡಬ್ಲ್ಯೂಆರ್‌ಸಿ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಕೂಡ ಎತ್ತಿಹಿಡಿದಿದೆ. ಆ ಮೂಲಕ ಕರ್ನಾಟಕಕ್ಕೆ ಮತ್ತೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

- ತಮಿಳುನಾಡಿಗೆ 15 ದಿನ 12,000 ಕ್ಯೂಸೆಕ್ ನೀರು ಹರಿಸಲು ಸೂಚನೆ
- ಸಿಡಬ್ಲ್ಯೂಆರ್‌ಸಿ ಶಿಫಾರಸ್ಸು ಎತ್ತಿಹಿಡಿದ ಸಿಡಬ್ಲ್ಯೂಎಂಎ





" ರಾಜ್ಯದ ಜನತೆ ತಾಳ್ಮೆಯಿಂದಿರಿ, ನಾವು ನಿಮಗಾಗಿಯೇ ಇದ್ದೇವೆ. ರೈತರನ್ನು ರಕ್ಷಿಸುವ ಶಕ್ತಿಯನ್ನು ಜನರು ನಮಗೆ ನೀಡಿದ್ದಾರೆ. ಯಾವುದೇ ಕಾರಣಕ್ಕೂ ರೈತರಿಗೆ ಸಮಸ್ಯೆಗಳನ್ನು ಉಂಟುಮಾಡಲು ನಾವು ಬಯಸುವುದಿಲ್ಲ. ಸೌಹಾರ್ದಯುತವಾಗಿ ಪರಿಹರಿಸಲಾಗುವುದು.

-ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

**ರಾಜ್ಯಕ್ಕೆ ಅನ್ಯಾಯ**

ಸಭೆಯಲ್ಲಿ ಕರ್ನಾಟಕದ ಪರವಾಗಿ ಭಾಗಿಯಾಗಿದ್ದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಪ್ರತಿಕ್ರಿಯಿಸಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಸಿಡಬ್ಲ್ಯೂಆರ್‌ಸಿ ಸಭೆ ಶಿಫಾರಸ್ಸನ್ನು ಆದೇಶವಾಗಿ ಮಾರ್ಪಾಡು ಮಾಡಿದೆ. ಪ್ರತಿ ದಿನ 15 ದಿನಗಳ ಕಾಲ 12 ಸಾವಿರ ಕ್ಯೂಸೆಕ್ ನೀರು ತಮಿಳುನಾಡಿಗೆ ಹರಿಸಬೇಕೆಂದು ಹೇಳಿದೆ. ಈ ಬಗ್ಗೆ ಸರ್ಕಾರ ಮುಂದೆ ಕಾನೂನು ಹೋರಾಟ ನಡೆಸಲಿದೆ. ತಮಿಳುನಾಡು 40 ಟಿಎಂಸಿ ನೀರಿಗೆ ಬೇಡಿಕೆ ಇಟ್ಟಿದೆ. ನಾವು ಅಷ್ಟು ಪ್ರಮಾಣದ ನೀರು ನಾವು ಬಿಡಲು ಸಾಧ್ಯವಿಲ್ಲ ಎಂದು ವಾದ ಮಂಡಿಸಿದ್ದೇವೆ ಎಂದು ಹೇಳಿದರು.

ಸಿಡಬ್ಲ್ಯೂಆರ್‌ಸಿ ಶಿಫಾರಸ್ಸು ಪ್ರಶ್ನಿಸಿ ಸಿಡಬ್ಲ್ಯೂಎಂಎಗೆ ಹೋಗಿದ್ದೆವು. ಆದರೆ, ಸಿಡಬ್ಲ್ಯೂಆರ್‌ಸಿ ಶಿಫಾರಸ್ಸು ಪಾಲಿಸುವಂತೆ ಪ್ರಾಧಿಕಾರವೂ ಆದೇಶಿಸಿದೆ. 15 ದಿನ 12,000 ಕ್ಯೂಸೆಕ್ ನೀರು ಹರಿಸುವಂತೆ ಆದೇಶಿಸಿದೆ. ಸಿಡಬ್ಲ್ಯೂಎಂಎ ಆದೇಶದಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ಮಳೆ ಪ್ರಮಾಣ ಕಡಿಮೆ ಇರುವುದರಿಂದ ಪರಿಸ್ಥಿತಿ ಗಂಭೀರವಾಗಿದೆ . ಸಿಡಬ್ಲ್ಯುಎಂಎ ಆದೇಶದ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದ್ದೇವೆ. ರಾಜ್ಯದ ಕಾನೂನು ತಂಡದ ಜೊತೆ ಚರ್ಚೆ ನಡೆಸುತ್ತೇವೆ ಎಂದು ವಿವರಿಸಿದರು.

» ನಾಲ್ಕನೇ ಪುಟದಲ್ಲಿ

### ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಚಿಂತನೆ

ತಮಿಳುನಾಡಿಗೆ ನಿತ್ಯ 3500 ಕ್ಯೂಸೆಕ್ ನೀರು ಬಿಡಬೇಕೆಂಬ ಸಿಡಬ್ಲ್ಯೂಆರ್‌ಸಿ ಆದೇಶವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಎತ್ತಿಹಿಡಿದಿದ್ದರಿಂದ ಕರ್ನಾಟಕ ಸರ್ಕಾರ ಸಮಾಧಾನಗೊಂಡಿದ್ದು, ಸಿಡಬ್ಲ್ಯೂಎಂಎ ಆದೇಶದ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಲು ಚಿಂತನೆ ನಡೆಸಿದೆ. ವಾಡಿಕೆಗಿಂತ ಕಡಿಮೆ ಮಳೆ ಹಾಗು ಕರ್ನಾಟಕದ ರೈತರು ಬೆಳೆದ ಬೆಳೆಗೂ ನೀರಿಲ್ಲ ಎನ್ನುವ ಅಂಶಗಳನ್ನಿಟ್ಟುಕೊಂಡು ಸುಪ್ರೀಂಕೋರ್ಟ್‌ನಲ್ಲಿ ಪ್ರಬಲ ವಾದ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಸಂಬಂಧ ಬುಧವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಲಸಂಪನ್ಮೂಲ ತಾಂತ್ರಿಕ ಸಲಹೆಗಾರರು, ಹಿರಿಯ ವಕೀಲರು, ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

# ಬೀಟಮ್ಮ 1 ಗುಂಪಿನ ಹೆಣ್ಣಾನೆಗೆ ರೇಡಿಯೋ ಕಾಲರ್

• ಪ್ರಜೋದಯ ವರದಿ

**ಹಾಸನ:** ಕಾಡಾನೆಗೆ ರೇಡಿಯೋ ಕಾಲರ್ ಅಳವಡಿಕೆಯ 2ನೇ ದಿನವಾದ ಮಂಗಳವಾರ ಅರಣ್ಯ ಇಲಾಖೆ ಅಧಿಕಾರಿ ಹಾಗು ಸಿಬ್ಬಂದಿ ನಿರಂತರ ಕಾರ್ಯಾಚರಣೆ ಮೂಲಕ ಬೇಲೂರು ತಾಲ್ಲೂಕಿನ ಹೆಗ್ಗಡಿಹಳ್ಳಿಯಲ್ಲಿ ಬೀಟಮ್ಮ 1 ಗುಂಪಿನ ಹೆಣ್ಣಾನೆಗೆ ರೇಡಿಯೋ ಕಾಲರ್ ಅಳವಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೀಟಮ್ಮ ಗುಂಪಿನ ಹೆಣ್ಣಾನೆಯೊಂದಕ್ಕೆ ಎರಡು ವರ್ಷಗಳ ಹಿಂದೆ ಅಳವಡಿಸಿದ್ದ ವಿದೇಶಿ ನಿರ್ಮಿತ ರೇಡಿಯೋ ಕಾಲರ್ ಬ್ಯಾಟರಿ ಅವಧಿ ಮುಗಿದ ಹಿನ್ನಲೆಯಲ್ಲಿ ಆನೆಗಳ ನಿಖರ ಚಲನವಲನ ಹಾಗು ಸ್ಥಳವನ್ನು ಪತ್ತೆಹಚ್ಚಲು ಸಾಧ್ಯವಾಗುತ್ತಿರಲಿಲ್ಲ. ಆ ಹಿನ್ನಲೆಯಲ್ಲಿ ಸ್ವದೇಶಿ ನಿರ್ಮಿತ ರೇಡಿಯೋ ಕಾಲರ್ ಅಳವಡಿಕೆಗೆ ಕ್ರಮ ವಹಿಸಲಾಗಿದೆ. ಗ್ರಾಮದ ಜಾವೀದ್ ಎಂಬುವವರ ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಯನ್ನು ಡ್ರೋನ್ ಕ್ಯಾಮರಾ ನೆರವಿನಿಂದ ಪತ್ತೆಹಚ್ಚಿದ ಅಧಿಕಾರಿಗಳು ಅರವಳಿಕೆ ಮದ್ದು ನೀಡಿ ಮೌನವಾಗಿಸಿದರು.

ಗುಂಪಿನಿಂದ ಬೇರ್ಪಟ್ಟ ಆನೆಗೆ ಪಶುವೈದ್ಯಾಧಿಕಾರಿಗಳಾದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಡಾ|| ವಸೀಮ್, ಮೈಸೂರು ವೃತ್ತದ ಡಾ|| ಆದರ್ಶ ಹಾಗು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಡಾ|| ವಿನಾಯಕ ಅವರು ಅರವಳಿಕೆ ಮದ್ದು ನೀಡಿ ನಂತರ ರೇಡಿಯೋ ಕಾಲರ್ ಅಳವಡಿಸಿದರು. ನಾಗರಹೊಳೆ ಆನೆ ಶಿಬಿರದಿಂದ ಬಂದಿರುವ ಏಕಲವ್ಯ ಹಾಗು ದುಬಾರೆ ಶಿಬಿರದ ಪ್ರಶಾಂತ, ಧನಂಜಯ, ಈಶ್ವರ, ಲಕ್ಷ್ಮಣ ಮತ್ತು ಅಜ್ಜಯ್ಯ ಕುಮ್ಕಿ ಆನೆಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡವು. ಈ ವರ್ಷದಲ್ಲಿ ಈ ವರೆಗೆ ನಾಲ್ಕು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗಿದೆ.



**ಎಸ್ಟೇಟ್ ಮಾಲೀಕರ ಅಡ್ಡಿ**

ಕಾಡಾನೆಗೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆಗೆ ಕಾಫಿ ಎಸ್ಟೇಟ್ ಮಾಲೀಕರು ಅಡ್ಡಿಪಡಿಸಿದ್ದರಿಂದ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಎಸ್ಟೇಟ್ ಮಾಲೀಕ ರಾಯ್ ಅವರು

» ನಾಲ್ಕನೇ ಪುಟದಲ್ಲಿ

# ಕರ್ನಾಟಕ ಬಂದ್‌ಗೆ ಮೂಡದ ಒಮ್ಮತ

• ಪ್ರಜೋದಯ ವರದಿ

**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಆದೇಶ ವಿರೋಧಿಸಿ ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದ ಕನ್ನಡಪರ ಸಂಘಟನೆಗಳಲ್ಲಿ ಒಮ್ಮತದ ಕೊರತೆ ಕಂಡುಬಂದಿದೆ.

ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವ ತೀರ್ಪಿನ ವಿರುದ್ದ ಆ. 13ರಂದು ಕನ್ನಡಪರ ಚಳವಳಿ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಅಖಿಲ ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿತ್ತು.

ಕಾವೇರಿ ಜಲಾಯನ ಪ್ರದೇಶದಲ್ಲಿ ಮಳೆ ಕೊರತೆ ಉಂಟಾಗಿ ಆ ಭಾಗದ ಜಲಾಶಯಗಳಲ್ಲಿ ನೀರಿನ ಕೊರತೆ ಇತ್ತು. ನಂತರದ ಬೆಳವಣಿಗೆಯಲ್ಲಿ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ಜಲಾಶಯಗಳಿಗೆ ನೀರು ಹರಿದುಬಂದು ತಮಿಳುನಾಡಿಗೆ ನೀರು ಬಿಡಲಾಗಿತ್ತು.

ಈ ಹಿನ್ನಲೆಯಲ್ಲಿ ಕರ್ನಾಟಕ ಬಂದ್ ಆಚರಣೆ ಬಗ್ಗೆ ಸಂಘಟನೆಗಳಲ್ಲಿ ಗೊಂದಲ ಉಂಟಾಗಿದೆ. ಆ.13ರಂದು ನಿಗದಿಯಂತೆ ಬಂದ್ ಆಚರಣೆ ಮಾಡೇ ಮಾಡುತ್ತೇವೆಂದು ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಆದರೆ, ಕನ್ನಡಪರ ಸಂಘಟನೆಗಳ ಮುಖಂಡರಾದ ಪ್ರವೀಣ್ ಕುಮಾರ್ ಶೆಟ್ಟಿ, ಶಿವರಾಮೇಗೌಡ, ಸಾ.ರಾ.ಗೋವಿಂದು ಮತ್ತಿತರರು ಸದ್ಯದ ಪರಿಸ್ಥಿತಿಯಲ್ಲಿ ಬಂದ್ ಮಾಡುವುದು ಬೇಡವೆಂಬ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಈಗಾಗಲೇ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ತಮಿಳುನಾಡಿಗೆ ನಾಲ್ಕುವರೆ ಟಿಎಂಸಿ ನೀರು ಹರಿಸಲಾಗಿದೆ. ಜಲಾಶಯಗಳಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾಗಿದೆ. ಇಂತಹ ಸಂದರ್ಭದಲ್ಲಿ ಬಂದ್ ಮಾಡುವುದು ಸಮಂಜಸವೇ ಎಂದು ಹೋರಾಟಗಾರರು ಚರ್ಚೆ ನಡೆಸಿದ್ದಾರೆ.



ಬಂದ್‌ಗೆ ಬೆಂಬಲ ನೀಡುವಂತೆ ಹೋಟೆಲ್ ಮಾಲೀಕರ ಸಂಘವಾಗಲಿ, ಇನ್ನಿತರ ಸಂಘವಾಗಲಿ ಈವರೆಗೆ ಬಂದ್ ಆಯೋಜಕರು ಪತ್ರ ಬರೆದು ಮನವಿ ಮಾಡಿಲ್ಲ ಎಂದು ತಿಳಿದುಬಂದಿದೆ.

ಬಂದ್ ಹಿನ್ನೆಲೆಯಲ್ಲಿ ಮುಂದಿನ ಹೋರಾಟದ ರೂಪುರೇಷೆ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ಬುಧವಾರ ಪ್ರವೀಣ್ ಕುಮಾರ್ ಶೆಟ್ಟಿ ನೇತೃತ್ವದ ಕರವೇ ಬಣ ಸಭೆ ಕರೆದಿದೆ.

ವಾಟಾಳ್ ನೇತೃತ್ವದಲ್ಲಿ ಈಗಾಗಲೇ ಮೈಸೂರು, ಮಂಡ್ಯ, ಅತ್ತಿಬೆಲೆ ಗಡಿಯಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದ್ದು, ಬಂದ್‌ಗೆ ತಯಾರಿ ಮಾಡಿಕೊಳ್ಳಲಾಗಿದೆ.

### ಜಿಲ್ಲೆಯಲ್ಲಿ ಶೇ.32ರಷ್ಟು ಮಾತ್ರ ಬಿತ್ತನೆ | ಸಚಿವ ಕೆ.ಎಂ.ಶಿವಲಿಂಗೇಗೌಡ ಮಾಹಿತಿ

# ಸೋಮವಾರ ಸರ್ಕಾರಕ್ಕೆ ಬರ ಅಧ್ಯಯನ ವರದಿ

• ಪ್ರಜೋದಯ ವರದಿ

**ಅರಸೀಕೆರೆ:** ಜಿಲ್ಲೆಯ ಬರ ಪರಿಸ್ಥಿತಿ, ಕುಡಿಯುವ ನೀರು, ಜಾನುವಾರುಗಳ ಮೇವಿನ ಲಭ್ಯತೆ ಕುರಿತು ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದು ಸರ್ಕಾರಕ್ಕೆ ಆ.17ರ ಸೋಮವಾರ ಬರ ಅಧ್ಯಯನ ವರದಿ ಸಲ್ಲಿಸಲಾಗುವುದೆಂದು ನೂತನ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಕಣಕಟ್ಟೆ ಹೋಬಳಿ ರಾಮನಹಳ್ಳಿಯಲ್ಲಿ ಮಂಗಳವಾರ ಅಧಿಕಾರಿಗಳೊಂದಿಗೆ ಬರ ಅಧ್ಯಯನ ನಡೆಸಿ ಮಾತನಾಡಿದ ಅವರು, ಬರದ ಕುರಿತು ಸಮಗ್ರ ವರದಿ ಸಿದ್ದಪಡಿಸಲು ಭಾನುವಾರ ವಿಶೇಷ ಸಭೆ ನಡೆಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಅಧಿಕಾರಿ

» ನಾಲ್ಕನೇ ಪುಟದಲ್ಲಿ



" ನಮ್ಮದು ಒಕ್ಕೂಟ ವ್ಯವಸ್ಥೆಯಾಗಿರುವುದರಿಂದ ರಾಜ್ಯಗಳು ಸಂಕಷ್ಟಕ್ಕೆ ಸಿಲುಕಿದಾಗ ಕೇಂದ್ರ ಸರ್ಕಾರ ನೆರವಿಗೆ ಬರಬೇಕು. ಕೇಂದ್ರ ಸರ್ಕಾರವೇ ಬರ ಅಧ್ಯಯನ ನಡೆಸಿ ಸೂಕ್ತ ಪರಿಹಾರ ಕಲ್ಪಿಸಬೇಕು. ದೆಹಲಿ ದೊರೆ ಎನಿಸಿಕೊಂಡಿರುವ ಪ್ರಧಾನಿ ಮೋದಿ ಕರ್ನಾಟಕದ ಬಗ್ಗೆ ತಾತ್ಸಾರ ಹೊಂದಬಾರದು.

-ಕೆ.ಎಂ.ಶಿವಲಿಂಗೇಗೌಡ, ಸಚಿವ

### ಖಾತೆ ಹಂಚಿಕೆ ವಿಳಂಬಕ್ಕೆ ಕಾರಣ ಗೊತ್ತಿಲ್ಲ

ಅರಸೀಕೆರೆ: ನೂತನ ಸಚಿವರಿಗೆ ಖಾತೆ ಹಂಚಿಕೆ ವಿಳಂಬಕ್ಕೆ ಕಾರಣ ಏನೆಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾತನಾಡುವಷ್ಟು ನಾನು ದೊಡ್ಡವನಲ್ಲವೆಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಯಾರಿಗೆ ಯಾವ ಖಾತೆ ಕೊಡಬೇಕೆಂಬುದನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗು ಹೈಕಮಾಂಡ್ ನಾಯಕರು ನಿರ್ಧರಿಸುತ್ತಾರೆ. ಪ್ರಮಾಣ ವಚನ ಸ್ವೀಕರಿಸಿದ ದಿನವೇ ಖಾತೆ ಹಂಚಿಕೆ ಮಾಡುವುದು ಸಂಪ್ರದಾಯ. ಆದರೆ, ಸ್ವಲ್ಪ ವಿಳಂಬವಾಗಿದೆ. ಮುಂದಿನ ಎರಡು ದಿನಗಳಲ್ಲಿ ಖಾತೆ ಹಂಚಿಕೆಯಾಗುತ್ತದೆ. ಎಲ್ಲವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ಬಿಡಲಾಗಿದೆ ಎಂದರು.

ಸಚಿವ ಸ್ಥಾನ ವಂಚಿತ ಶಾಸಕರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆಹ್ವಾನ ನೀಡಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ಮುಕ್ತ ಆಹ್ವಾನ ಯಾರಿಗೆ ನೀಡಿದ್ದಾರೆಂಬುದು ಮುಖ್ಯ. ಅವರ ರಾಜಕೀಯ ಗಿಮಿಕ್‌ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಅವರು ಬಿಜೆಪಿ ಶಾಸಕರಿಗೆ ಆಹ್ವಾನ ನೀಡಿರಬಹುದು. ಅವರ ಅಭಿಪ್ರಾಯ ಏನಿದೆ ಎಂಬುದು ಗೊತ್ತಿಲ್ಲ. ಅದರ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡೋಣವೆಂದರು.

# ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ

### ಎತ್ತಿನಗಾಡಿ, ಟ್ರ್ಯಾಕ್ಟರ್‌ನಲ್ಲಿ ಮೆರವಣಿಗೆ | ರೈತ ಸಂಘದಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಹಾಗು ಮೆಕ್ಕೆಜೋಳ ಬಿತ್ತನೆಯಿಂದ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ನೇತೃತ್ವದಲ್ಲಿ ಎತ್ತಿನ ಗಾಡಿ, ಟ್ರ್ಯಾಕ್ಟರ್ ಮೂಲಕ ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಮಾತನಾಡಿ, ರೈತರ ಸಮಸ್ಯೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಿ, ಸೂಕ್ತವಾದ ಪರಿಹಾರ ನೀಡಬೇಕು. ಅನ್ನದಾತರ ಸಂಕಷ್ಟಕ್ಕೆ ಸರ್ಕಾರ ನೆರವಾಗಬೇಕೆಂದು ಒತ್ತಾಯಿಸಿದರು.



ರೈತ ಮುಖಂಡ ಕಣಗಾಲ್ ಮೂರ್ತಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಮಳೆ ಕೊರತೆಯ ನಡುವೆಯೂ ರೈತರು ದುಬಾರಿ ಬೆಲೆ ನೀಡಿ ಮೆಕ್ಕೆಜೋಳ ಬಿತ್ತನೆ ಬೀಜ ಹಾಗು ಗೊಬ್ಬರ ಖರೀದಿಸಿ ಬಿತ್ತನೆ ಮಾಡಿದ್ದಾರೆ. ಆದರೆ, ಕಳಪೆ ಬೀಜದಿಂದ ಬೆಳೆ ಬಿಳಿಸುಳಿ ರೋಗಕ್ಕೆ ತುತ್ತಾಗಿ ಹಾನಿಗೊಳಗಾಗಿದೆ. ಸರ್ಕಾರ ಎಕರೆಗೆ ಕನಿಷ್ಠ 50 ಸಾವಿರ ರೂ. ಪರಿಹಾರ ಘೋಷಿಸಬೇಕೆಂದು ಆಗ್ರಹಿಸಿದರು.

» ನಾಲ್ಕನೇ ಪುಟದಲ್ಲಿ

### ಸಚಿವ ಸ್ಥಾನ ವಂಚಿತರ ಪ್ರತ್ಯೇಕ ಸಭೆ

**ಮೈಸೂರು:** ಸಚಿವ ಸ್ಥಾನ ವಂಚಿತ ಶಾಸಕರು ಮಂಗಳವಾರ ಪ್ರತ್ಯೇಕ ಸಭೆ ನಡೆಸಿದ್ದಾರೆ.

ಮಾಜಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಮತ್ತು ತನ್ವೀರ್ ಸೇಠ್ ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಸಭೆ ನಡೆಸಿದ್ದಾರೆ. ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ತನ್ವೀರ್ ಸೇಠ್ ಅವರು, ನಾವು ಮೂವರು ಯಾವತ್ತೂ ಒಂದಾಗಬೇಕಿತ್ತು. ಈಗ ಒಂದಾಗುವ ಕಾಲ ಬಂದಿದೆ. ನಾವು ಒಂದೇ ಪಕ್ಷದಲ್ಲಿದ್ದವರು, ಜೊತೆಯಲ್ಲಿ ಸಭೆಗಳನ್ನು ಮಾಡಿರಲಿಲ್ಲ. ಈಗ ಸಭೆ ಮಾಡಿದ್ದೇವೆ. ಈಗ ನಡೆದಿರುವ ಸಚಿವ ಸಂಪುಟದ ಬೆಳವಣಿಗೆ ಎಲ್ಲವೂ ಸರಿ ಇದೆ ಎಂದು ನಾವು ಒಪ್ಪಿಕೊಳ್ಳುವುದಿಲ್ಲ ಎಂದರು.

# ಹೊಸ ರೈಲು ಸಂಚಾರ, ಟಿಕೆಟ್ ದರ ಪರಿಷ್ಕರಣೆಗೆ ಬೇಡಿಕೆ

### ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ಗೆ ಮನವಿ ಸಲ್ಲಿಸಿದ ಸಂಸದ ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಹಾಸನ:** ಹಾಸನ-ಯಶವಂತಪುರ ನಡುವೆ ಸಂಚರಿಸುವ ಮೆಮು ರೈಲು ಟಿಕೆಟ್ ದರವನ್ನು ಪರಿಷ್ಕರಣೆ ಮಾಡಬೇಕೆಂಬುದು ಸೇರಿ ಜಿಲ್ಲೆಯ ಜನರ ರೈಲ್ವೆ ಸಂಪರ್ಕ, ಹೊಸ ರೈಲು ಸೇವೆಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಹಲವು ಬೇಡಿಕೆಗಳನ್ನು ಸಂಸದ ಶ್ರೇಯಸ್ ಪಟೇಲ್ ಅವರು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಸಲ್ಲಿಸಿದರು.

ಹಾಸನ-ಯಶವಂತಪುರ ನಡುವೆ ಸಂಚರಿಸುವ ಮೆಮು ಸೇವೆಯನ್ನು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಸ್ಥರು ಹಾಗು ದೈನಂದಿನ ಪ್ರಯಾಣಿಕರು ಅವಲಂಬಿಸಿದ್ದಾರೆ. ಪ್ರಯಾಣಿಕರ ಹಿತದೃಷ್ಟಿಯಿಂದ ಈ ಸೇವೆಯ ದರವನ್ನು ಪರಿಷ್ಕರಿಸಬೇಕು. ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಸಮಯದಲ್ಲಿ ಹೆಚ್ಚುವರಿ ಡೆಮು, ಮೆಮು ಸೇವೆಗಳನ್ನು ಆರಂಭಿಸಿ ದೈನಂದಿನ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಮನವಿ ಮಾಡಿದ್ದಾರೆ.



ಮೊಸಳೆ ಹೊಸಹಳ್ಳಿ ರೈಲ್ವೆ ನಿಲ್ದಾಣವು ಹೊಸದಾಗಿ ಅಭಿವೃದ್ಧಿ ಪಡಿಸಲಾದ ಪ್ರಮುಖ ನಿಲ್ದಾಣವಾಗಿದ್ದು, ಪ್ರಸ್ತುತ ನಿಯಮಿತ ಪ್ರಯಾಣಿಕ ರೈಲು ನಿಲುಗಡೆ ಇಲ್ಲದಿರುವುದರಿಂದ ಜನರಿಗೆ ಪ್ರಯೋಜನ ದೊರೆಯುತ್ತಿಲ್ಲ. ಮೊಸಳೆ ಹೊಸಹಳ್ಳಿಯಲ್ಲಿ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು, ಸರ್ಕಾರಿ ವಿದ್ಯಾರ್ಥಿ ನಿಲಯಗಳು ಇರುವುದರಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ಸಿಬ್ಬಂದಿ

» ನಾಲ್ಕನೇ ಪುಟದಲ್ಲಿ

### ಹೊ.ನ.ಪುರದಲ್ಲಿ ಮನೆಗಳ ಸರಣಿ ಕಳವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಒಂದೇ ರಾತ್ರಿಯಲ್ಲಿ ಮೂರು ಮನೆಗಳಲ್ಲಿ ಕಳ್ಳತನವಾಗಿರುವ ಘಟನೆ ತಾಲ್ಲೂಕಿನ ಚೋಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರವಿ, ಶಿವಕುಮಾರ್ ಎಂಬುವವರ ಮನೆಯಿಂದ 79 ಗ್ರಾಂ ತೂಕದ ಚಿನ್ನಾಭರಣ ಹಾಗು 50 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಆ. 9ರ ರಾತ್ರಿ ರವಿ ಅವರ ಮನೆಗೆ ಬಂದಿರುವ ಕಳ್ಳರು ಹಿಂಭಾಗದಲ್ಲಿ ಅಳವಡಿಸಿದ್ದ ವಿದ್ಯುತ್ ಬಲ್ಬನ್ನು ಅಲ್ಲಿಯೇ ಬಿಚ್ಚಿಟ್ಟು ಬಾಗಿಲು ಮುರಿದು ಒಳ ಪ್ರವೇಶಿಸಿದ್ದಾರೆ. ಹಾಲ್‌ನಲ್ಲಿಟ್ಟಿದ್ದ ಪೆಟ್ಟಿಗೆಯನ್ನು 150 ಮೀಟರ್ ದೂರ ತೆಗೆದುಕೊಂಡು ಹೋಗಿ ಅದರಲ್ಲಿದ್ದ 79 ಗ್ರಾಂ ತೂಕದ ಚಿನ್ನಾಭರಣ, 30 ಸಾವಿರ ರೂ. ದೋಚಿದ್ದಾರೆ. ನಂತರ ರವಿ ಅವರ ಸಹೋದರ ಶಿವಕುಮಾರ್ ಮನೆಗೆ ನುಗ್ಗಿ ಪೆಟ್ಟಿಗೆಯನ್ನು ಸುಮಾರು 50 ಮೀಟರ್ ದೂರದಲ್ಲಿಟ್ಟು ಅದರಲ್ಲಿದ್ದ 20 ಸಾವಿರ ರೂ. ತೆಗೆದುಕೊಂಡಿದ್ದಾರೆ. ಅದೇ ರೀತಿ ಸುಬ್ಬಮ್ಮ ಎಂಬುವವರ ಮನೆಯ ಬಟ್ಟೆಬರೆಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿದ್ದಾರೆ. ಹಳ್ಳಿ ಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಜಿಲ್ಲೆಯಲ್ಲಿ 1.48 ಲಕ್ಷ ನೋಂದಣಿ | ಮೆಕ್ಕೆಜೋಳ, ರಾಗಿಯೇ ಸಿಂಹಪಾಲು

# ಬರದಿಂದ ಬದುಕುಳಿಯಲು ರೈತರು ಬೆಳೆ ವಿಮೆ ಮೊರೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಮಳೆ ಕೊರತೆ, ಬಿತ್ತನೆ ವಿಳಂಬ, ಹವಾಮಾನ ವೈಪರೀತ್ಯದಿಂದ ಬೆಳೆ ನಷ್ಟದ ಅಪಾಯದಿಂದ ಪಾರಾಗಲು ಜಿಲ್ಲೆಯ ರೈತರು ಬೆಳೆ ವಿಮೆ ಮೊರೆ ಹೋಗಿದ್ದಾರೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,47,991 ರೈತರು ಬೆಳೆವಿಮೆಗೆ ನೋಂದಣಿ ಮಾಡಿಕೊಂಡಿದ್ದಾರೆ. 49,552 ಹೆಕ್ಟೇರ್ ಪ್ರದೇಶ ವಿಮೆ ವ್ಯಾಪ್ತಿಗೆ ಒಳಪಟ್ಟಿದೆ.

ಅರ್ಜಿಗಳ ಪೈಕಿ ಮೆಕ್ಕೆಜೋಳ ಮತ್ತು ರಾಗಿ ಬೆಳೆಗಳದ್ದೇ ಸಿಂಹಪಾಲು ಪಡೆದಿವೆ. ಮೆಕ್ಕೆಜೋಳದ ಬೆಳೆಗೆ 74,450 ಅರ್ಜಿಗಳು ಸಲ್ಲಿಕೆಯಾಗಿದ್ದರೆ, ರಾಗಿ ಬೆಳೆಗೆ 49,421 ಅರ್ಜಿಗಳು ಸಲ್ಲಿಕೆಯಾಗಿವೆ. ಅಂದರೆ, ಈ ಎರಡು ಬೆಳೆಗಳೇ ಒಟ್ಟು ಅರ್ಜಿಗಳು ಶೇ. 83.7ರಷ್ಟು ಪಾಲು ಹೊಂದಿವೆ. ಬೆಳೆ ಪ್ರದೇಶದಲ್ಲಿಯೂ ಈ ಎರಡು ಬೆಳೆಗಳು ಸೇರಿ 41,283 ಹೆಕ್ಟೇರ್, ಅಂದರೆ ಒಟ್ಟು ವಿಮೆ ವ್ಯಾಪ್ತಿಯ ಶೇ.83.3ರಷ್ಟು ಪ್ರದೇಶ ಆವರಿಸಿದೆ. ಭತ್ತ ಮತ್ತು ರಾಗಿ ಬೆಳೆಗಳಿಗೆ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ಆ.14 ವರೆಗೂ ಕಾಲಾವಕಾಶ ಇರುವುದರಿಂದ ಅರ್ಜಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಲಿವೆ.

ಪಶು ಆಹಾರ ಮತ್ತು ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ಮೆಕ್ಕೆಜೋಳ ಈ ಬಾರಿ ಬಿಳಿಸುಳಿ ರೋಗಕ್ಕೆ ತುತ್ತಾಗಿರುವುದರಿಂದ ಬಹುತೇಕ ರೈತರು ನಷ್ಟದಿಂದ ಪಾರಾಗಲು ಬೆಳೆ ವಿಮೆಯ ಆಶ್ರಯ ಪಡೆದಿದ್ದಾರೆ. ಬಯಲು ಸೀಮೆ ಪ್ರದೇಶದಲ್ಲಿ ಮಳೆ ಕೊರತೆಯಿಂದ ರಾಗಿಯನ್ನೂ ಬೆಳೆಯಲಾಗದ ಸ್ಥಿತಿ ನಿರ್ಮಾಣವಾಗಿದೆ. ಅಲಸಂದೆ ಬೆಳೆದ 15,841 ರೈತರು ವಿಮೆ ನೋಂದಣಿ ಪಡೆದಿದ್ದಾರೆ. ಹೆಸರು 3,607, ಭತ್ತ 1,984, ಟೊಮೆಟೊ 1,469 ಅರ್ಜಿಗಳು ಸಲ್ಲಿಕೆಯಾಗಿವೆ. ಉದ್ದು, ಹತ್ತಿ, ಹುರುಳಿ, ತೊಗರಿ, ಆಲೂಗೆಡ್ಡೆ, ಎಳ್ಳು ಸೇರಿ ಇತರೆ ಬೆಳೆಗಳಿಗೂ ವಿಮೆ ಸೌಲಭ್ಯ ಪಡೆಲು ರೈತರು ಪ್ರೀಮಿಯಂ ಮೊತ್ತವನ್ನು ಪಾವತಿ ಮಾಡಿದ್ದಾರೆ.

**ಹಾಸನ, ಅರಸೀಕೆರೆಯಲ್ಲೇ ಹೆಚ್ಚಿನ ಅರ್ಜಿ**

ತಾಲ್ಲೂಕುವಾರು ಅಂಕಿ-ಅಂಶ ಗಮನಿಸಿದರೆ ಹಾಸನ ಮತ್ತು ಅರಸೀಕೆರೆ ತಾಲ್ಲೂಕುಗಳು ಮುಂಚೂಣಿಯಲ್ಲಿವೆ. ಹಾಸನ ತಾಲ್ಲೂಕಿನಲ್ಲಿ 44,940 ಅರ್ಜಿಗಳು ಸಲ್ಲಿಕೆಯಾಗಿದ್ದು, 12,345 ಹೆಕ್ಟೇರ್ ಪ್ರದೇಶ ವಿಮೆ ವ್ಯಾಪ್ತಿಯಲ್ಲಿದೆ. ಅರಸೀಕೆರೆಯಲ್ಲಿ 44,049 ಅರ್ಜಿಗಳು ಹಾಗು 17,385 ಹೆಕ್ಟೇರ್ ಪ್ರದೇಶ ದಾಖಲಾಗಿದೆ. ಚನ್ನರಾಯಪಟ್ಟಣದಲ್ಲಿ 28,586 ಅರ್ಜಿಗಳು ಹಾಗು 8,476 ಹೆಕ್ಟೇರ್ ಪ್ರದೇಶವಿದೆ. ಈ ಮೂರು ತಾಲ್ಲೂಕುಗಳಲ್ಲಿಯೇ ಒಟ್ಟು ಅರ್ಜಿಗಳ ಶೇ.79.4ರಷ್ಟು ಹಾಗು ಬೆಳೆ ಪ್ರದೇಶದ ಶೇ. 77.1ರಷ್ಟು ದಾಖಲಾಗಿದೆ. ಉಳಿದಂತೆ ಬೇಲೂರಿನಲ್ಲಿ 8,468 ಅರ್ಜಿಗಳು, ಅರಕಲಗೂಡಿನಲ್ಲಿ 7,841, ಆಲೂರಿನಲ್ಲಿ 6,751, ಹೊಳೆನರಸೀಪುರದಲ್ಲಿ 6,389 ಹಾಗು ಸಕಲೇಶಪುರದಲ್ಲಿ 967 ಅರ್ಜಿಗಳು ಸಲ್ಲಿಕೆಯಾಗಿವೆ.

» ನಾಲ್ಕನೇ ಪುಟದಲ್ಲಿ



**ಐದು ವರ್ಷಗಳಲ್ಲೇ ಈ ಬಾರಿ ಹೆಚ್ಚಿನ ನೋಂದಣಿ**

ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆಗೆ ನೋಂದಾಯಿಸಿದ ರೈತರ ಸಂಖ್ಯೆಯು ಹಿಂದಿನ ಐದು ವರ್ಷಗಳಿಂತ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿದೆ.
2021-22ರಲ್ಲಿ 23,058 ಅರ್ಜಿಗಳಿದ್ದರೆ, 2022-23ರಲ್ಲಿ 1,15,573ಕ್ಕೆ ಏರಿಕೆಯಾಗಿದೆ. 2023-24ರಲ್ಲಿ ಸಂಖ್ಯೆ 80,534ಕ್ಕೆ ಇಳಿದಿದ್ದು, 2024-25ರಲ್ಲಿ ಮತ್ತೆ 1,22,192ಕ್ಕೆ ಏರಿಕೆಯಾಗಿದೆ. 2025-26ನೇ ಸಾಲಿನಲ್ಲಿ 1,47,991 ಅರ್ಜಿಗಳು ದಾಖಲಾಗಿವೆ.

**ತಾಲ್ಲೂಕುವಾರು ಅರ್ಜಿಗಳ ಸಂಖ್ಯೆ ಮತ್ತು ಬೆಳೆ ಪ್ರದೇಶ**

| ತಾಲ್ಲೂಕು | ಅರ್ಜಿಗಳ ಸಂಖ್ಯೆ | ಬೆಳೆ ಪ್ರದೇಶ (ಹೆಕ್ಟೇರ್) |
|---|---|---|
| ಆಲೂರು | 6,751 | 2,500 |
| ಅರಕಲಗೂಡು | 7,841 | 2,937 |
| ಅರಸೀಕೆರೆ | 44,049 | 17,385 |
| ಬೇಲೂರು | 8,468 | 3,634 |
| ಚನ್ನರಾಯಪಟ್ಟಣ | 28,586 | 8,476 |
| ಹಾಸನ | 44,940 | 12,345 |
| ಹೊಳೆನರಸೀಪುರ | 6,389 | 1,945 |
| ಸಕಲೇಶಪುರ | 967 | 330 |
| ಒಟ್ಟು | 1,47,991 | 49,552 |

| ಬೆಳೆವಾರು | ಅರ್ಜಿ ಸಂಖ್ಯೆ |
|---|---|
| ಬೆಳೆ | ಅರ್ಜಿ |
| ಮೆಕ್ಕೆಜೋಳ | 74,450 |
| ರಾಗಿ | 49,421 |
| ಅಲಸಂದೆ | 15,841 |
| ಹೆಸರು | 3,607 |
| ಟೊಮೆಟೊ | 1,469 |
| ಭತ್ತ | 1,984 |
| ಆಲೂಗಡ್ಡೆ | 498 |
| ಉದ್ದು | 443 |
| ಹುರುಳಿ | 77 |
| ತೊಗರಿ | 19 |

### ಡಿಸಿಎಂ ಸ್ಥಾನ ನೀಡುವ ಕುರಿತು ಚರ್ಚೆ

• ಪ್ರಜೋದಯ ವರದಿ

**ಬೆಳಗಾವಿ:** ನನಗೆ ಹಾಗು ಸಚಿವ ಎಂ.ಬಿ.ಪಾಟೀಲ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವ ಕುರಿತು ಪಕ್ಷದೊಳಗೆ ಚರ್ಚೆ ನಡೆದಿದ್ದು ನಿಜ. ಆದರೆ, ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಅಂತಿಮ ನಿರ್ಧಾರ ಕೈಗೊಳ್ಳುತ್ತದೆ. ಸಮಯ ಬಂದಾಗ ಈ ವಿಷಯವಾಗಿ ಮಾತನಾಡುವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹಿತದೃಷ್ಟಿಯಿಂದ ಉಪಮುಖ್ಯಮಂತ್ರಿ ಸ್ಥಾನ ನೀಡುವ ವಿಚಾರ ಚರ್ಚೆಯಾಗುತ್ತಿತ್ತೇ ಹೊರತು, ನಾವು ಯಾವುದೇ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ. ಪಕ್ಷವೇ ನಮ್ಮನ್ನು ಗುರುತಿಸಬೇಕು. ನಾವು ಯಾವುದೇ ರೀತಿಯ ಒತ್ತಡ ಹೇರುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಅಧಿವೇಶನ ಆರಂಭವಾಗುವ ಹಿನ್ನಲೆಯಲ್ಲಿ ಹೊಸದಾಗಿ ಸಂಪುಟ ಸೇರಿದ 19 ಸಚಿವರಿಗೆ ಇದೇ 13ರ ಒಳಗೆ ಖಾತೆ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದರು.



» 1909ರ ಅಕ್ಟೋಬರ್ 30ರಂದು ಮುಂಬೈನ ಪ್ರತಿಷ್ಠಿತ ಪಾರ್ಸಿ ಕುಟುಂಬದಲ್ಲಿ ಜನಿಸಿದ ಹೋಮಿ ಜಹಾಂಗೀರ್ ಭಾಭಾ ಬಾಲ್ಯದಿಂದಲೇ ಅಸಾಧಾರಣ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಿದ್ದರು. ಅವರ ತಂದೆ ಖ್ಯಾತ ವಕೀಲರಾಗಿದ್ದು, ಕುಟುಂಬದಲ್ಲಿ ಶಿಕ್ಷಣ ಹಾಗೂ ಶಿಸ್ತಿಗೆ ಅತ್ಯಂತ ಮಹತ್ವ ನೀಡಲಾಗುತ್ತಿತ್ತು. ಬಾಲ್ಯದಲ್ಲಿಯೇ ಗಣಿತ, ಭೌತಶಾಸ್ತ್ರ ಹಾಗೂ ಚಿತ್ರಕಲೆಯಲ್ಲಿ ಅವರಿಗೆ ವಿಶೇಷ ಆಸಕ್ತಿ ಬೆಳೆಯಿತು. ಮುಂದೆ ಅವರು ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಇಂಜಿನಿಯರಿಂಗ್ ಅಧ್ಯಯನಕ್ಕಾಗಿ ತೆರಳಿದರೂ, ಅವರ ಮನಸ್ಸನ್ನು ಸಂಪೂರ್ಣವಾಗಿ ಸೆಳೆದದ್ದು ಸೈದ್ಧಾಂತಿಕ ಭೌತಶಾಸ್ತ್ರ. ಅಂತಿಮವಾಗಿ ತಮ್ಮ ಆಸಕ್ತಿಯ ದಾರಿಯನ್ನೇ ಆರಿಸಿಕೊಂಡ ಅವರು ವಿಶ್ವಮಟ್ಟದ ವಿಜ್ಞಾನಿಯಾಗಿ ಬೆಳೆದರು.

# ಭಾರತದ ಅಣುಯುಗದ ಶಿಲ್ಪಿ ಹೋಮಿ ಭಾಭಾ

ವೀಕೆಂಡ್ ವಿತ್ ಮೋಹನ್

1909ರ ಅಕ್ಟೋಬರ್ 30ರಂದು ಮುಂಬೈನ ಪ್ರತಿಷ್ಠಿತ ಪಾರ್ಸಿ ಕುಟುಂಬದಲ್ಲಿ ಜನಿಸಿದ ಹೋಮಿ ಜಹಾಂಗೀರ್ ಭಾಭಾ ಬಾಲ್ಯದಿಂದಲೇ ಅಸಾಧಾರಣ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಿದ್ದರು. ಅವರ ತಂದೆ ಖ್ಯಾತ ವಕೀಲರಾಗಿದ್ದು, ಕುಟುಂಬದಲ್ಲಿ ಶಿಕ್ಷಣ ಹಾಗೂ ಶಿಸ್ತಿಗೆ ಅತ್ಯಂತ ಮಹತ್ವ ನೀಡಲಾಗುತ್ತಿತ್ತು. ಬಾಲ್ಯದಲ್ಲಿಯೇ ಗಣಿತ, ಭೌತಶಾಸ್ತ್ರ ಹಾಗೂ ಚಿತ್ರಕಲೆಯಲ್ಲಿ ಅವರಿಗೆ ವಿಶೇಷ ಆಸಕ್ತಿ ಬೆಳೆಯಿತು. ಮುಂದೆ ಅವರು ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಇಂಜಿನಿಯರಿಂಗ್ ಅಧ್ಯಯನಕ್ಕಾಗಿ ತೆರಳಿದರೂ, ಅವರ ಮನಸ್ಸನ್ನು ಸಂಪೂರ್ಣವಾಗಿ ಸೆಳೆದದ್ದು ಸೈದ್ಧಾಂತಿಕ ಭೌತಶಾಸ್ತ್ರ. ಅಂತಿಮವಾಗಿ ತಮ್ಮ ಆಸಕ್ತಿಯ ದಾರಿಯನ್ನೇ ಆರಿಸಿಕೊಂಡ ಅವರು ವಿಶ್ವಮಟ್ಟದ ವಿಜ್ಞಾನಿಯಾಗಿ ಬೆಳೆದರು. 1939ರಲ್ಲಿ ದ್ವಿತೀಯ ಮಹಾಯುದ್ಧ ಆರಂಭವಾದಾಗ ಭಾಭಾ ಭಾರತಕ್ಕೆ ಬಂದರು. ಯುದ್ಧ ಮುಗಿದ ನಂತರ ಮತ್ತೆ ಇಂಗ್ಲೆಂಡ್‌ಗೆ ಮರಳಬಹುದಾಗಿದ್ದರೂ ಅವರು ಮಹತ್ವದ ನಿರ್ಧಾರ ಕೈಗೊಂಡರು. ಭಾರತದಲ್ಲಿ ಪ್ರತಿಭಾವಂತ ಯುವಕರ ಕೊರತೆಯಿಲ್ಲ, ಆದರೆ ಅವರಿಗೆ ಸೂಕ್ತ ಅವಕಾಶಗಳ ಕೊರತೆಯಿದೆ ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಇದೇ ಆಲೋಚನೆಯಿಂದ ಅವರು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರಿನಲ್ಲಿ ನೊಬೆಲ್ ವಿಜೇತ ಸರ್ ಸಿ.ವಿ. ರಾಮನ್ ಅವರೊಂದಿಗೆ ಕಾರ್ಯನಿರ್ವಹಿಸಲು ಆರಂಭಿಸಿದರು.

1950ರ ದಶಕದ ಆರಂಭದಲ್ಲಿಯೇ ಭಾಭಾ ಭಾರತದಲ್ಲಿರುವ ಥೋರಿಯಂ ಸಂಪತ್ತಿನ ಮಹತ್ವವನ್ನು ಗುರುತಿಸಿದರು. ವಿಶ್ವದ ಅತಿ ದೊಡ್ಡ ಥೋರಿಯಂ ನಿಕ್ಷೇಪಗಳಲ್ಲಿ ಒಂದನ್ನು ಭಾರತ ಹೊಂದಿದೆ ಎಂಬ ವೈಜ್ಞಾನಿಕ ಅಂಶವನ್ನು ಆಧರಿಸಿ, ಮೂರು ಹಂತಗಳ ಅಣುಶಕ್ತಿ ಕಾರ್ಯಕ್ರಮವನ್ನು ಅವರು ರೂಪಿಸಿದರು. ಮೊದಲ ಹಂತದಲ್ಲಿ ನೈಸರ್ಗಿಕ ಯುರೇನಿಯಂ, ಎರಡನೇ ಹಂತದಲ್ಲಿ - ಬ್ರೀಡರ್ ರಿಯಾಕ್ಟರ್ ಹಾಗೂ ಮೂರನೇ ಹಂತದಲ್ಲಿ ಥೋರಿಯಂ ಆಧಾರಿತ ಅಣುಶಕ್ತಿ ಉತ್ಪಾದನೆ ಎಂಬ ದೂರದೃಷ್ಟಿಯ ಯೋಜನೆ ಇಂದಿಗೂ ಭಾರತದ ಅಣು ನೀತಿಯ ಮೂಲಾಧಾರವಾಗಿದೆ. ಈ ಯೋಜನೆ ರೂಪುಗೊಂಡ ಸಮಯದಲ್ಲಿ ಜಗತ್ತಿನ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ಇಷ್ಟೊಂದು ದೀರ್ಘಾವಧಿಯ ವೈಜ್ಞಾನಿಕ ಕಾರ್ಯತಂತ್ರ ಕಂಡುಬಂದಿರಲಿಲ್ಲ ಎಂಬುದು ವಿಶೇಷ.

ಅವರ ನಾಯಕತ್ವದಲ್ಲಿ 1956ರಲ್ಲಿ ಏಷ್ಯಾದ ಮೊದಲ ಸಂಶೋಧನಾ ಅಣು ರಿಯಾಕ್ಟರ್ ಅಪ್ಸರಾ ಕಾರ್ಯಾರಂಭ ಮಾಡಿತು. ಇದೇ ಅವಧಿಯಲ್ಲಿ ಭಾರತೀಯ ವಿಜ್ಞಾನಿಗಳಿಗೆ ವಿದೇಶಗಳಲ್ಲಿ ತರಬೇತಿ, ದೇಶೀಯ ತಾಂತ್ರಿಕ ಪರಿಣತಿ ಮತ್ತು ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವ ಕಾರ್ಯಕ್ಕೂ ಭಾಭಾ ಹೆಚ್ಚಿನ ಆದ್ಯತೆ ನೀಡಿದರು. ಭಾಭಾ ಅವರ ವ್ಯಕ್ತಿತ್ವದ ಮತ್ತೊಂದು ವಿಶೇಷತೆ ಎಂದರೆ ಅವರು ಕೇವಲ ವಿಜ್ಞಾನಿಯಾಗಿರಲಿಲ್ಲ. ಉತ್ತಮ ಕಲಾರಸಿಕ, ಸಂಗೀತ ಪ್ರೇಮಿ ಮತ್ತು ಚಿತ್ರಕಲೆಯ ಅಭಿಮಾನಿಯೂ ಆಗಿದ್ದರು. ವಿಜ್ಞಾನ ಮತ್ತು ಕಲೆ ಪರಸ್ಪರ ವಿರೋಧಿಗಳಲ್ಲ; ಎರಡೂ ಮಾನವನ ಸೃಜನಶೀಲತೆಯ ಅಭಿವ್ಯಕ್ತಿಗಳೆಂದು ಅವರು ನಂಬಿದ್ದರು. ಅವರ ಈ ವಿಶಾಲ ದೃಷ್ಟಿಕೋನ ಅನೇಕ ಸಂಸ್ಥೆಗಳಲ್ಲಿ ಮುಕ್ತ ಚಿಂತನೆಯ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸಲು ನೆರವಾಯಿತು.

ಡಾ. ಹೋಮಿ ಜಹಾಂಗೀರ್ ಭಾಭಾ ಕಟ್ಟಿದ ಸಂಸ್ಥೆಗಳು, ರೂಪಿಸಿದ ಕಾರ್ಯತಂತ್ರಗಳು ಮತ್ತು ಬೆಳೆಸಿದ ವೈಜ್ಞಾನಿಕ ಸಂಸ್ಕೃತಿ ಇಂದು ಕೂಡ ಭಾರತದ ಪ್ರಗತಿಗೆ ದಿಕ್ಕು ತೋರಿಸುತ್ತಿವೆ. ಅವರ ಜೀವನದ ಮೊದಲಾರ್ಧವೇ ಒಬ್ಬ ಪ್ರತಿಭಾವಂತ ವಿಜ್ಞಾನಿ ಹೇಗೆ ರಾಷ್ಟ್ರ ನಿರ್ಮಾತೃನಾಗಿ ರೂಪಾಂತರ ಗೊಳ್ಳಬಹುದು ಎಂಬುದಕ್ಕೆ ಅಪೂರ್ವ ಮಾದರಿ. ಆದರೆ ಅವರ, ಭಾರತವನ್ನು ಅಣುಶಕ್ತಿಯ ಮಹಾಶಕ್ತಿಯನ್ನಾಗಿ ರೂಪಿಸುವ ಕನಸಿನ ನಡುವೆ ನಡೆದ ಅವರ ಅಕಾಲಿಕ ಮರಣ, ಅದರ ಸುತ್ತ ಬೆಳೆದ






ಅನುಮಾನಗಳು, ಅಧಿಕೃತ ತನಿಖೆಗಳು ಮತ್ತು ಇಂದಿಗೂ ಚರ್ಚೆಗೆ ಗ್ರಾಸವಾಗಿರುವ ಪಿತೂರಿ ಸಿದ್ಧಾಂತಗಳು ಭಾರತೀಯ ಇತಿಹಾಸದ ಅತ್ಯಂತ ಚರ್ಚಿತ ಘಟನೆಗಳಲ್ಲಿ ಒಂದಾಗಿ ಉಳಿದಿವೆ.

1964ರಲ್ಲಿ ಚೀನಾ ತನ್ನ ಮೊದಲ ಅಣು ಪರೀಕ್ಷೆ ನಡೆಸಿದ ನಂತರ ಭಾರತದ ರಾಷ್ಟ್ರೀಯ ಭದ್ರತೆ ಕುರಿತು ಹೊಸ ಚರ್ಚೆಗಳು ಆರಂಭವಾದವು. ಈ ಸಂದರ್ಭದಲ್ಲಿ ಭಾಭಾ ಅವರು ಭಾರತವು ತಾಂತ್ರಿಕ ಸಾಮರ್ಥ್ಯ ಹೊಂದಿದ್ದರೆ ಅಗತ್ಯವಿದ್ದಲ್ಲಿ ಅಣ್ವಸ್ತ್ರ ನಿರ್ಮಾಣವೂ ಸಾಧ್ಯವೆಂದು ಸಾರ್ವಜನಿಕವಾಗಿ ಹೇಳಿದ್ದರು. ಆದರೆ ಅವರ ಮೂಲ ಒತ್ತಾಯ ಅಣುಶಕ್ತಿಯ ಶಾಂತಿಯುತ ಬಳಕೆಯ ಮೇಲೆಯೇ ಇತ್ತು. ಆದಾಗ್ಯೂ, ಅವರ ಈ ಹೇಳಿಕೆಗಳು ಭಾರತವು ಭವಿಷ್ಯದಲ್ಲಿ ಅಣ್ವಸ್ತ್ರ ಸಾಮರ್ಥ್ಯ ಹೊಂದುವ ಸಾಧ್ಯತೆಯನ್ನು ಜಗತ್ತಿನ ಪ್ರಮುಖ ರಾಷ್ಟ್ರಗಳು ಗಂಭೀರವಾಗಿ ಪರಿಗಣಿಸಲು ಕಾರಣವಾಯಿತು. ಆದರೆ ಭಾರತದ ವೈಜ್ಞಾನಿಕ ಇತಿಹಾಸದ ಅತ್ಯಂತ ದುಃಖಕರ ದಿನ 1966ರ ಜನವರಿ 24.

ಡಾ. ಭಾಭಾ ಅವರು ಜಿನೀವಾದಲ್ಲಿ ನಡೆಯಲಿದ್ದ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಸಭೆಗೆ ತೆರಳುತ್ತಿದ್ದ ವೇಳೆ ಏರ್ ಇಂಡಿಯಾ ಫ್ಲೈಟ್- 101 ಕಾಂಚನಜುಂಗಾ ವಿಮಾನ, - ಮತ್ತು ಇಟಲಿಯ ಗಡಿಯಲ್ಲಿರುವ ಮಾಂಟ್ ಬ್ಲಾಂಕ್ ಪರ್ವತಕ್ಕೆ ಡಿಕ್ಕಿ ಹೊಡೆದು ಪತನವಾಯಿತು. ವಿಮಾನದಲ್ಲಿದ್ದ ಎಲ್ಲಾ 117 ಮಂದಿ ಮೃತಪಟ್ಟರು. ಅವರೊಂದಿಗೆ ಭಾರತ ತನ್ನ ಅತ್ಯಂತ ದೂರದೃಷ್ಟಿಯ ವಿಜ್ಞಾನಿಯನ್ನು ಕಳೆದುಕೊಂಡಿತು. ಈ ಘಟನೆ ದೇಶಾದ್ಯಂತ ತೀವ್ರ ಆಘಾತ ಉಂಟುಮಾಡಿತು. ಅಂದು ಅನೇಕ ವಿಜ್ಞಾನಿಗಳು ಭಾರತವು ಕೇವಲ ಒಬ್ಬ ವಿಜ್ಞಾನಿಯನ್ನು ಕಳೆದುಕೊಂಡಿಲ್ಲ; ತನ್ನ ವೈಜ್ಞಾನಿಕ ಭವಿಷ್ಯದ ಪ್ರಮುಖ ಶಿಲ್ಪಿಯನ್ನು ಕಳೆದುಕೊಂಡಿದೆ, ಎಂದು ಕಂಬನಿ ಮಿಡಿದಿದ್ದರು.

ಅಪಘಾತದ ಕುರಿತು ನಡೆದ ಅಧಿಕೃತ ತನಿಖೆಯಲ್ಲಿ ವಿಮಾನವು ಮಾಂಟ್ ಬ್ಲಾಂಕ್ ಪರ್ವತಶ್ರೇಣಿಯ ಸಮೀಪ ತನ್ನ ನಿಖರ ಸ್ಥಾನವನ್ನು ತಪ್ಪಾಗಿ ಅಂದಾಜಿಸಿದ್ದರಿಂದ ಈ ದುರಂತ ಸಂಭವಿಸಿದೆ ಎಂದು ನಿರ್ಣಯಿಸಲಾಯಿತು.

ವಿಮಾನದ ಸಿಬ್ಬಂದಿ ಮತ್ತು ವಾಯು ಸಂಚಾರ ನಿಯಂತ್ರಣದ ನಡುವಿನ ಸಂವಹನದ ಗೊಂದಲ ಹಾಗೂ ಎತ್ತರದ ಲೆಕ್ಕಾಚಾರದಲ್ಲಿನ ದೋಷವೇ ಅಪಘಾತಕ್ಕೆ ಪ್ರಮುಖ ಕಾರಣ ಎಂದು ತನಿಖಾ ವರದಿಗಳು ತಿಳಿಸಿವೆ. ಲಭ್ಯವಿದ್ದ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಅಧಿಕೃತ ತನಿಖೆಗಳು ಯಾವುದೇ ಸ್ಫೋಟಕ, ವಿಧ್ವಂಸಕ ಕೃತ್ಯ ಅಥವಾ ಹತ್ಯೆಯ ಪುರಾವೆಯನ್ನು ಕಂಡುಹಿಡಿದಿಲ್ಲ.

ಆದಾಗ್ಯೂ, ಭಾಭಾ ಅವರ ಮರಣದ ಕೆಲವೇ ವರ್ಷಗಳಲ್ಲಿ ಹಲವು ಅನುಮಾನಗಳು ಸಾರ್ವಜನಿಕ ವಲಯದಲ್ಲಿ ಹರಿದಾಡತೊಡಗಿದವು. ಕೆಲವು ಲೇಖಕರು ಮತ್ತು ಮಾಜಿ ಗುಪ್ತಚರ ಅಧಿಕಾರಿಗಳು ಈ ಅಪಘಾತದ ಹಿಂದೆ ವಿದೇಶಿ ಗುಪ್ತಚರ ಸಂಸ್ಥೆಗಳ ಕೈವಾಡ ಇರಬಹುದೆಂದು ಊಹಿಸಿದರು. ಇದರ ಬಗ್ಗೆ ಹಲವು ಪುಸ್ತಕಗಳು, ಲೇಖನಗಳು ಮತ್ತು ದೂರದರ್ಶನ ಕಾರ್ಯಕ್ರಮಗಳಲ್ಲಿ ಆರೋಪಗಳು ಕೇಳಿಬಂದವು. ಕೆಲವು ಬರಹಗಳಲ್ಲಿ ವಿಮಾನದಲ್ಲಿ ಬಾಂಬ್ ಅಳವಡಿಸಲಾಗಿತ್ತು ಎಂದು ಹೇಳಲಾಯಿತು.

ಇನ್ನೂ ಕೆಲವು ಪ್ರಕಟಣೆಗಳು ಅಮೆರಿಕ ಭಾರತವನ್ನು ಅಣ್ವಸ್ತ್ರ ರಾಷ್ಟ್ರವಾಗುವುದನ್ನು ತಡೆಯಲು ಇಂತಹ ಕ್ರಮ ಕೈಗೊಂಡಿರಬಹುದು ಎಂಬ ಊಹೆಗಳನ್ನು ಮುಂದಿಟ್ಟವು. ಈ ಆರೋಪಗಳಿಗೆ ಹೆಚ್ಚುವರಿ ಚರ್ಚೆಯನ್ನು ತಂದದ್ದು ಅಮೆರಿಕದ ಮಾಜಿ ಗುಪ್ತಚರ ಅಧಿಕಾರಿ ಗ್ರೆಗರಿ ಡಗ್ಲಾಸ್ ಪ್ರಕಟಿಸಿದ ಕಾನ್ ವರ್ಸೇಷನ್ಸ್ ವಿದ್ ದಿ ಕ್ರೋ ಎಂಬ ಪುಸ್ತಕ. ಅದರಲ್ಲಿ ಸಿಐಎ ಮಾಜಿ ಅಧಿಕಾರಿ ರಾಬರ್ಟ್ ಕ್ರೌಲೆ ಅವರೊಂದಿಗೆ ನಡೆದ ಸಂಭಾಷಣೆ. ಆದರೆ ಈ ಪುಸ್ತಕದ ವಿಶ್ವಾಸಾರ್ಹತೆಯ ಬಗ್ಗೆ ಇತಿಹಾಸಕಾರರು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಆ ಸಂಭಾಷಣೆಗಳು ಸ್ವತಂತ್ರವಾಗಿ ದೃಢೀಕರಿಸಲ್ಪಟ್ಟಿಲ್ಲ, ಸಂಬಂಧಿತ ದಾಖಲೆಗಳು ಲಭ್ಯವಿಲ್ಲ, ಮತ್ತು ಅವುಗಳನ್ನು ಯಾವುದೇ ಅಧಿಕೃತ ತನಿಖೆ ಸಮರ್ಥಿಸಿಲ್ಲ.

ಭಾಭಾ ಅವರ ನಿಧನದ ನಂತರ ಟ್ರಾಂಬೆ ಅಣು ಸಂಶೋಧನಾ ಕೇಂದ್ರಕ್ಕೆ ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ (ಬಿಎಆರ್‌ಸಿ) ಎಂದು ಮರುನಾಮಕರಣ ಮಾಡಲಾಯಿತು. ಇದು ಕೇವಲ ಸ್ಮಾರಕವಲ್ಲ; ಅವರ ದೂರದೃಷ್ಟಿಗೆ ಸಲ್ಲಿಸಿದ ರಾಷ್ಟ್ರೀಯ ಗೌರವವಾಗಿತ್ತು. ಇಂದು ಬಿಎಆರ್‌ಸಿ ಅಣು ವಿದ್ಯುತ್, ಅಣು ಇಂಧನ, ವೈದ್ಯಕೀಯ ಐಸೋಟೋಪ್‌ಗಳು, ಕ್ಯಾನ್ಸರ್ ಚಿಕಿತ್ಸಾ ತಂತ್ರಜ್ಞಾನ, ಆಹಾರ ಸಂರಕ್ಷಣೆ, ಕೃಷಿ ಸಂಶೋಧನೆ, ನೀರಿನ ಶುದ್ಧೀಕರಣ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಅನೇಕ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುತ್ತಿದೆ.

ಭಾಭಾ ಅವರ ಕನಸುಗಳು ಇನ್ನೂ ಈ ಸಂಸ್ಥೆಯ ಮೂಲಕ ಜೀವಂತವಾಗಿವೆ. ಇಂದು ಭಾರತವು ವಿಶ್ವದ ಪ್ರಮುಖ ಅಣುಶಕ್ತಿ ರಾಷ್ಟ್ರಗಳಲ್ಲಿ ಒಂದಾಗಿದೆ. ಅಣು ವಿದ್ಯುತ್ ಸ್ಥಾವರಗಳು, ಸ್ವದೇಶಿ ರಿಯಾಕ್ಟರ್‌ಗಳು, ಥೋರಿಯಂ ಸಂಶೋಧನೆ, ಅಣು ಇಂಧನ ತಂತ್ರಜ್ಞಾನ ಮತ್ತು ಅಂತಾರಾಷ್ಟ್ರೀಯ ಅಣು ಸಹಕಾರ ಒಪ್ಪಂದಗಳ ಮೂಲಕ ಭಾರತ ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದೆ. ಈ ಸಾಧನೆಗಳ ಮೂಲದಲ್ಲಿ ಡಾ. ಹೋಮಿ ಜಹಾಂಗೀರ್ ಭಾಭಾ ಅವರು ಹಾಕಿದ ಅಡಿಪಾಯವಿದೆ. ಅವರು ಕೇವಲ ವಿಜ್ಞಾನಿಯಾಗಿರಲಿಲ್ಲ; ರಾಷ್ಟ್ರದ ಭವಿಷ್ಯವನ್ನು ದಶಕಗಳ ಮುಂದೆಯೇ ಊಹಿಸಿ ಸಂಸ್ಥೆಗಳನ್ನು ಕಟ್ಟಿದ ರಾಷ್ಟ್ರನಿರ್ಮಾತೃ.

ಡಾ. ಹೋಮಿ ಜಹಾಂಗೀರ್ ಭಾಭಾ ಅವರ ಜೀವನವನ್ನು ಅವಲೋಕಿಸಿದಾಗ ಒಂದು ಮಹತ್ವದ ಪಾಠ ಸಿಗುತ್ತದೆ. ಒಬ್ಬ ವ್ಯಕ್ತಿಯ ಪ್ರತಿಭೆ ದೇಶಕ್ಕೆ ಹೆಸರು ತಂದುಕೊಡಬಹುದು. ಆದರೆ ಅದೇ ವ್ಯಕ್ತಿ ದೂರದೃಷ್ಟಿಯಿಂದ ಸಂಸ್ಥೆಗಳನ್ನು ನಿರ್ಮಿಸಿದರೆ, ಆ ಸಂಸ್ಥೆಗಳು ಪೀಳಿಗೆಗಳವರೆಗೆ ರಾಷ್ಟ್ರವನ್ನು ಮುನ್ನಡೆಸುತ್ತವೆ. ಭಾಭಾ ಮರಣದ ಕುರಿತು ಹಲವು ಪ್ರಶ್ನೆಗಳು ಇನ್ನೂ ಸಾರ್ವಜನಿಕ ಚರ್ಚೆಯಲ್ಲಿ ಉಳಿದಿದ್ದರೂ, ಅವರ ಸಾಧನೆಗಳ ಬಗ್ಗೆ ಯಾವುದೇ ವಿವಾದವಿಲ್ಲ. ಭಾರತದ ಅಣುಯುಗದ ಆರಂಭ, ವೈಜ್ಞಾನಿಕ ಸ್ವಾವಲಂಬನೆಯ ಅಡಿಪಾಯ, ಉನ್ನತ ಸಂಶೋಧನಾ ಸಂಸ್ಥೆಗಳ ನಿರ್ಮಾಣ ಮತ್ತು ವಿಶ್ವದ ವೈಜ್ಞಾನಿಕ ನಕ್ಷೆಯಲ್ಲಿ ಭಾರತದ ಸ್ಥಾನವನ್ನು ಗಟ್ಟಿಗೊಳಿಸಿದ ಶ್ರೇಯಸ್ಸು ಎಂದೆಂದಿಗೂ ಡಾ. ಹೋಮಿ ಜಹಾಂಗೀರ್ ಭಾಭಾ ಅವರ ಹೆಸರಿನೊಂದಿಗೆ ಅಚ್ಚಳಿಯದೆ ಉಳಿಯುತ್ತದೆ.

**- ಮೋಹನ್** ವಿಶ್ವ

# ಮಿಶ್ರ ಇಂಧನ ಎಥೆನಾಲ್‌ಗೆ ಬದಲಿ ಆಶಾಕಿರಣದ ಹುಡುಕಾಟ

**“ ಕೆಲ ಯುವಕರು ಪಾನೀಪುರಿಯಂತೆಯೆ ಇದನ್ನು ಬೆಂಗಳೂರಿನಲ್ಲಿ ಪ್ರಚುರಪಡಿಸಲು ಹೊಸೆದ ಹೊಸ ಹೆಸರೇ ಬ್ರಾಹ್ಮಿನ್ಸ್ ಬಿಯರ್! ಶರ್ಕರಪಿಷ್ಠ (ಕಾರ್ಬೋಹೈಡ್ರೇಟ್)ಯುಕ್ತ ಆಹಾರ ಪದಾರ್ಥಗಳನ್ನು ಕಿಣ್ವನ/ಹುದುಗಿಸಲು ಬಿಟ್ಟರೆ ಅದರಿಂದ ಹೊಮ್ಮುವುದೆ- ಹುಳಿಹೆಂಡ. ಹುದುಗುವಿಕೆಯಿಂದ (ಸೂಕ್ಷ್ಮಾಣುಜೀವಿಗಳ ಸಹಾಯದಿಂದ ನಡೆಯುವ ವಿಘಟನ ಜೀವ ರಾಸಾಯನಿಕ ಕ್ರಿಯೆ) ಹೆಂಡ(ಆಲ್ಕೊಹಾಲ್ )ದೊಂದಿಗೆ ವಿವಿಧ ಹುಳಿ ಆಮ್ಲಗಳೂ ಉತ್ಪತ್ತಿಯಾಗುತ್ತವೆ.**



ಇಂಧನಲೋಕ ಇತ್ತೀಚೆಗೆ ಬೆಂಗಳೂರಿನ ವ್ಯಾಪಾರಿ ಮಳಿಗೆಯ ಯುವತಂಡವೊಂದು ಬ್ರಾಹ್ಮಿನ್ಸ್ ಬಿಯರ್ ಎಂಬ ಶೀರ್ಷಿಕೆಯಲ್ಲಿ ಪಾನೀಯವೊಂದನ್ನು ಪ್ರಚುರಪಡಿಸುವ ರೀಲನ್ನು ಸಾಮಾಜಿಕ ಜಾಲತಾಣದಲ್ಲಿ ಸುತ್ತಿಬಿಟ್ಟಿತ್ತು! ಆ ಜಾಹೀರಾತಿನಲ್ಲಿ ಪಾನೀಯದ ಗುಣಗಾನ ಮಾಡುತ್ತಾ ಕೊನೆಗೆ ಅದು ಅಲ್ಕೋ ಹಾಲ್ ರಹಿತ ಎಂದು ಹೇಳುತ್ತಾರೆ! ಇದೇನಿದು, ಆಲ್ಕೋಹಾಲ್ ರಹಿತವಾದದ್ದು ಬಿಯರ್ ಆಗಲು ಹೇಗೆ ಸಾಧ್ಯ? ಜೊತೆಗೆ ಬಿಯರ್ ಅಲ್ಲದ್ದಕ್ಕೆ ಬಿಯರ್ ಎಂದು ಹೆಸರಿಸುವ ದರ್ದು ಏನೆಂಬ ಪ್ರಶ್ನೆಯೂ ಸಹಜ. ವಾಸ್ತವದಲ್ಲಿ ಇದು ಹವ್ಯಕ ಬ್ರಾಹ್ಮಣರ ಪಾಕಶಾಲೆಯ ಶಿರೋಮಣಿಗಳಲ್ಲಿ ಒಂದಾದ ಅಪ್ಪೇಹುಳಿ ಎಂಬ ಪದಾರ್ಥ ಅಥವಾ ಪಾನೀಯ!

ಹದವಾದ ಹುಳಿ-ಸಿಹಿ-ಖಾರ ಹಾಗೂ ವಗ್ಗರಣೆಯ ಘಮ ಹೊಂದಿರುವ ಈ ಅಪ್ಪೇಹುಳಿ ಅತ್ಯಂತ ರುಚಿಕಾರಿ. ಸಾಮಾನ್ಯವಾಗಿ ಇದರ ಪ್ರಧಾನ ಭೂಮಿಕೆಯಲ್ಲಿರುವುದು- ಹುಳಿಮಾವಿನ(ಅಪ್ಪೆ) ರಸ, ಅದಿಲ್ಲದಿದ್ದರೆ ಕಂಚಿಕಾಯಿ (ಹೆರಳೆಕಾಯಿ), ಅದೂ ಇಲ್ಲದಿದ್ದರೆ ಹುಳಿಗಾಗಿ ನಿಂಬೆ/ ಹುಣಸೆಯೂ ಆದೀತು. ಬೇಸಿಗೆ ಕಾಲದಲ್ಲಂತೂ ಹವ್ಯಕರ ಅಡುಗೆಯಲ್ಲಿ ಇದು ಇರಲೇಬೇಕು. ಇನ್ನು ಹಬ್ಬ ಹರಿದಿನಗಳಲ್ಲಿ ಅಪ್ಪೇಹುಳಿ ಇಲ್ಲದಿದ್ದರೆ ಅದು ಊಟವೇ ಅಲ್ಲ ಎಂಬಷ್ಟು ಸ್ಥಾನ-ಮಾನ ಈ ಪದಾರ್ಥಕೆ!

ಕೆಲ ಯುವಕರು ಪಾನೀಪುರಿಯಂತೆಯೆ ಇದನ್ನು ಬೆಂಗಳೂರಿನಲ್ಲಿ ಪ್ರಚುರಪಡಿಸಲು ಹೊಸೆದ ಹೊಸ ಹೆಸರೇ ಬ್ರಾಹ್ಮಿನ್ಸ್ ಬಿಯರ್! ಶರ್ಕರಪಿಷ್ಠ (ಕಾರ್ಬೋಹೈಡ್ರೇಟ್ )ಯುಕ್ತ ಆಹಾರ ಪದಾರ್ಥಗಳನ್ನು ಕಿಣ್ವನ/ಹುದುಗಿಸಲು ಬಿಟ್ಟರೆ ಅದರಿಂದ ಹೊಮ್ಮುವುದೆ- ಹುಳಿಹೆಂಡ. ಹುದುಗುವಿಕೆಯಿಂದ (ಸೂಕ್ಷ್ಮಾಣುಜೀವಿಗಳ ಸಹಾಯದಿಂದ ನಡೆಯುವ ವಿಘಟನ ಜೀವ ರಾಸಾಯನಿಕ ಕ್ರಿಯೆ) ಹೆಂಡ(ಆಲ್ಕೊಹಾಲ್)ದೊಂದಿಗೆ ವಿವಿಧ ಹುಳಿ ಆಮ್ಲಗಳೂ ಉತ್ಪತ್ತಿಯಾಗುತ್ತವೆ. ಅಂದರೆ ಯಾವುದೇ ನಿರ್ದಿಷ್ಟ ರುಚಿಯಿಲ್ಲದ ಹೆಂಡಕ್ಕೆ ಹುಳಿ ಹಿಂಡುವ ಕೆಲಸ ಮಾಡುವುದು ಈ ಆಮ್ಲ! ಆದ್ದರಿಂದ ಹುದುಗಿದ ಪದಾರ್ಥ ಹುಳಿಯಾಗಿದೆ ಎಂದರೆ ಅಲ್ಲಿ ಹೆಂಡವೂ ಇದೆ ಎಂದರ್ಥ. ಆದ್ದರಿಂದಲೇ ಇಂತಹ ಪದಾರ್ಥಕ್ಕೆ ಹುಳಿಹೆಂಡ ಎಂಬ ಪದ ಹೊಮ್ಮಿರುವುದು!

ದೋಸೆ ಹಿಟ್ಟನ್ನೂ ಹದವಾಗಿ ಹುದುಗಿಸಿ ಹುಳಿ ಬರಿಸಿ ಮಾಡುವುದರಿಂದ ಮುಂಚೆ ಅದಕ್ಕೆ ದೋಷ ಎಂಬ ಹೆಸರು ಇತ್ತೆಂಬ ಐತಿಹ್ಯವಿದೆ. ಅಮಲುಕಾರಕ ಮದ್ಯವು ಬ್ರಾಹ್ಮಣರಿಗೆ ನಿಷಿದ್ಧವಾಗಿದ್ದರಿಂದ ಹುದುಗಿಸುವಿಕೆಯ ಉತ್ಪನ್ನಗಳನ್ನು ದೋಷವೆಂದೇ ಪರಿಗಣಿಸಲಾಗಿತ್ತು. ಸದಾ ಬೌದ್ಧಿಕ ಚಟುವಟಿಕೆಗಳಲ್ಲಿಯೆ ತೊಡಗಿರಬೇಕಾದ ಇವರಿಗೆ ಬುದ್ಧಿಮಂದಕಾರಿ ಮದಿರೆಯ ನಿಷೇಧ ಸಹಜವೇ ತಾನೆ? ಹೀಗಿದ್ದಾಗ, ಮದ್ಯವಿಲ್ಲದಿದ್ದರೂ ಅಪ್ಪೇಹುಳಿಗೆ ಬ್ರಾಹ್ಮಣರ ಬಿಯರ್ ಎಂಬ ಅಲ್ಪೋಪಮೆಯ ನಾಮಧೇಯದ ಕಾರಣವೆಂದರೆ- ನಿಷಿದ್ಧವಾದುದರ ಕುರಿತ ಕುತೂಹಲ ಎನ್ನಬಹುದು! ನಮ್ಮೂರಿನಲ್ಲಿ ಒಂದು ದನ ಸದಾ ಬೇಲಿ ಹಾರಿಹೋಗಿಯೇ ಮೇಯುತ್ತಿತ್ತು. ಅದರ ಪ್ರಕಾರ ಬೇಲಿಯೊಳಗೆ ಇರುವುದೆಲ್ಲಾ ಸ್ವಾದಿಷ್ಟವಾದುದು!

ಬೇಲಿ ಹಾರಿ ನೋಡುವ ಈ ಕುತೂಹಲ ಮನುಷ್ಯನಿಗೆ ಕಡಿಮೆ ಇರಲು ಸಾಧ್ಯವೇ? ಇದೇ ಈ ವ್ಯಾಪಾರದ ಬಂಡವಾಳ! ಹುದುಗುವಿಕೆ ಪ್ರಕ್ರಿಯೆಯನ್ನೇ ಮಾಡದೆ ಕೇವಲ ವಿಶಿಷ್ಟ ಪರಿಮಳಭರಿತ ಮಾವಿನಮಿಡಿಯ ಹುಳಿ ರಸದಿಂದ ತಯಾರಿಸುವ ಅಪ್ಪೇಹುಳಿಯಲ್ಲಿ ಆಲ್ಕೋಹಾಲ್ ಇರುವುದೇ ಇಲ್ಲ. ಆದರೆ ಹುದುಗಿಸಿದ ಉತ್ಪನ್ನಗಳಲ್ಲಿ ಮೇಲೆ ಹೇಳಿದಂತೆ ಆಲ್ಕೋಹಾಲ್ ಜೊತೆಗೆ ವಿವಿಧ ಆಮ್ಲ, ಅಥವಾ ಬಿಡುಗಡೆಯಾಗುವ ಕಾರ್ಬನ್ ಡೈಆಕ್ಸೈಡ್ ಅನಿಲವು ಮತ್ತೆ ಆ ದ್ರವದಲ್ಲಿ ಕರಗಿ ಕಾರ್ಬನಿಕ್ ಆಮ್ಲವಾಗಿ ಹುಳಿ ರುಚಿಯನ್ನು ನೀಡುತ್ತದೆ.

ಅಂದರೆ ಸಂಸ್ಕರಿಸದ ಮದ್ಯವು ಹುಳಿಯಾಗೇ ಇರುತ್ತದೆ. ಆದರೆ ರಾಸಾಯನಿಕವಾಗಿ ಆಲ್ಕೋಹಾಲನ್ನು ಪ್ರತ್ಯೇಕಿಸಿದಾಗ ಅದು ಹುಳಿಯನ್ನು ಕಳೆದುಕೊಳ್ಳುತ್ತದೆ. ಹಾಗೆ ನೋಡಿದರೆ ಹುಳಿ ಬಂದ ದೋಸೆಹಿಟ್ಟಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಆಲ್ಕೋಹಾಲ್ ಉತ್ಪತ್ತಿಯಾಗಿದ್ದರೂ ಅದು ದೋಸೆಯಲ್ಲಿ ಇರುವುದಿಲ್ಲ, ಬಂಡಿಯ ಮೇಲೆ ಬೇಯಿಸುವಾಗ ನೀರಿಗಿಂತಲೂ ಕಡಿಮೆ ಕುದಿಯುವ ಬಿಂದು ಇರುವ ಆಲ್ಕೋಹಾಲ್ ಹಾರಿ ಹೋಗಿರುತ್ತದೆ. ಅಂದರೆ ಬೆಂದ ದೋಸೆ- ದೋಷಮುಕ್ತವಾಗಿ ಬಿಡುತ್ತದೆ!

ಒಟ್ಟಾರೆ ಹೇಳುವುದಾದರೆ ಹುಳಿ ಇರುವುದೆಲ್ಲದರಲ್ಲೂ ಆಲ್ಕೋಹಾಲ್ ಇರಬೇಕೆಂದಿಲ್ಲ, ಆದರೆ ಆಲ್ಕೋಹಾಲ್ ಉತ್ಪತ್ತಿಯಾಗುವಾಗ ಹುಳಿ ಬಂದೇ ಬರುವುದು. ಹಾಗಾಗಿ ಬರಿ ಹುಳಿಯನ್ನು ಆಸ್ವಾದಿಸಿಯೆ ಬಿಯರ್ ಕುಡಿದೆನೆಂದು ತಮಾಷೆ ಮಾಡಿಕೊಳ್ಳುವ ಪಾನೀಯವೇ- ಅಪ್ಪೇಹುಳಿ ಅಲಿಯಾಸ್ ಬ್ರಾಹ್ಮಿನ್ಸ್ ಬಿಯರ್.

ಹಾಗಾದರೆ ಮದ್ಯ ನಿಷೇಧವಿರದ ಬ್ರಾಹ್ಮಣೇತರರು ಕುಡಿಯುವ ನಿಜವಾದ ಬಿಯರ್ ಅನ್ನು- ಅಬ್ರಾಹ್ಮಣರ ಅಪ್ಪೇಹುಳಿ ಎಂದು ಹೆಸರಿಸಬಹುದೇನೊ?! ಪ್ರಸ್ತುತ ಬರಹದ ಉದ್ದೇಶ ಯಾರ ಆಹಾರಕ್ರಮವನ್ನು ಟೀಕಿಸುವ, ಅಥವಾ ವಿಶ್ಲೇಷಿಸುವದು ಅಲ್ಲವೇ ಅಲ್ಲ. ಬದಲಿಗೆ, ಇಂದು ಇಡೀ ಭಾರತದ ವಾಹನಗಳ ದೇಹದಲ್ಲಿ ಹರಿಯುತಿರುವ ಇ-20 ಎಂಬ ಮಿಶ್ರಇಂಧನ ಅಥವಾ ಬೆರಕೆ ಇಂಧನ ಕುರಿತದ್ದು. ಅಂದರೆ ಆಲ್ಕೋಹಾಲನ್ನು ಪಾನೀಯದ ಹೊರತಾಗಿ ವಾಹನದ ಇಂಧನವಾಗಿ ಬಸುವ ಕುರಿತು.

ಕೆಲ ತಿಂಗಳ ಹಿಂದೆ ರಜೆಗೆ ಊರಿಗೆ ಬಂದಿದ್ದ ಮಗ ತಿರುಗಾಡಲು ನನ್ನ ಕಾರನ್ನು ಬಳಸಿದ. ತೀರಾ ಅಗತ್ಯವೆಸಿದಾಗ ಮಾತ್ರ ಏಸಿ ಬಳಸಿ, ಸದಾ ಮೈಲೇಜಿನ ಬಗ್ಗೆ ಅಪಾರ ಕಾಳಜಿಯಿಂದ ಕಾರು ಓಡಿಸುತ್ತಿದ್ದ ನನಗೆ, ಆತ ಬಳಸಿದ ಅನಂತರ ಸರಾಸರಿ ಮೈಲೇಜು ಗಣನೀಯವಾಗಿ ಕುಸಿದದ್ದು ಗಮನಕ್ಕೆ ಬಂತು. ಆ ಕುರಿತು ಕೊಂಚ ಜಟಾಪಟಿಯೂ ಆಯ್ತು! ಆದರೆ ವಾಹನ ವಾರಸುದಾರನ ತೆಕ್ಕೆಗೆ ಬಂದು ಅನೇಕ ದಿನಗಳಾದರೂ ಮೈಲೇಜು ಸಹಜ ಸ್ಥಿತಿಗೆ ಬಾ(ಏ)ರದಿದ್ದಾಗ ಚಕಿ(ಕುಪಿ)ತ ಗೊಂಡೆ!

ಕ್ರಮೇಣ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದ ಸುದ್ದಿಗಳಿಂದ ವಾಸ್ತವದ ಅರಿವಾಯ್ತು. ಇದು ಮಗನ ಉಪಾದ್ಯಪಿಯಲ್ಲ, ಬದಲಿಗೆ ಸರಕಾರದ್ದು, ಎಂದು! ಹೌದು ಇ-20 ಪೆಟ್ರೋಲ್‌ದಿಂದ ಜನಸಾಮಾನ್ಯರಿಗೆ ನಿಧಾನವಾಗಿ ಮೊದಲು ಗೋಚರವಾದ ಸಂಗತಿಯೆಂದರೆ ವಾಹನದ ಮೈಲೇಜು ಸ್ವಲ್ಪಮಟ್ಟಿಗೆ ಇಳಿದಿರುವುದು. ವಾಯುಮಾಲಿನ್ಯ ಕಡಿಮೆ ಆಗುವ ಧನಾತ್ಮಕ ಪರಿಣಾಮ ಇರುವುದಾದರೂ ಅದು ಅಷ್ಟು ಬೇಗ ಗಮನಕ್ಕೆ ಬರುವಂತದ್ದಲ್ಲ.

ಇ-20 ಮಿಶ್ರಪೆಟ್ರೋಲ್ ಕುರಿತು ಈಗಾಲೆ ಮಾಧ್ಯಮಗಳಲ್ಲಿ ಸಾಕಷ್ಟು ಲೇಖನಗಳು, ಚರ್ಚೆಗಳೂ ಬಂದಿವೆ, ಬರುತ್ತಲೂ ಇವೆ. ಆದರೆ ಪ್ರಸ್ತುತ ಬರಹವು ರಾಜಕೀಯ ಚರ್ಚೆಯನ್ನು ಪಕ್ಕಕಿಟ್ಟು ಕೇವಲ ವೈಜ್ಞಾನಿಕ ವಿಶ್ಲೇಷಣಾ ಕೇಂದ್ರಿತವಾದದ್ದು. ಈಗ ನಮ್ಮ ವಾಹನಗಳೆಲ್ಲಾ ಸಂಚಾರಕ್ಕಾಗಿ ದಿನನಿತ್ಯ ಕುಡಿಯುತ್ತಿರುವುದು ಇ-20 ಪೆಟ್ರೋಲನ್ನು. ಅಂದರೆ 20 ಪ್ರತಿಶತ ಎಥೆನಾಲ್ (25) ಮಿಶ್ರಣಗೊಳಿಸಿದ ಪೆಟ್ರೋಲ್. ಎಥೆನಾಲ್- ಆಲ್ಕೋಹಾಲ್ ವರ್ಗಕ್ಕೆ ಸೇರಿದ ಒಂದು ರಾಸಾಯನಿಕ ಸಾವಯವ ಸಂಯುಕ್ತ. ಇದು ಸಕ್ಕರೆ ಉದ್ದಿಮೆಯಲ್ಲಿ ಬರುವ ಪರಿತ್ಯಕ್ತ ದ್ರಾವಣವಾದ ಮೊಲಾಸಿಸ್ ಅನ್ನು ಹುದುಗಿಸಿ ಅನಂತರ ಭಟ್ಟಿ ಇಳಿಸುವಿಕೆಯಿಂದ ಹೊಮ್ಮುವ ಒಂದು ಲಾಭದಾಯಕ ಉಪಉತ್ಪನ್ನ.

ಹಾಳಾದ ಅಕ್ಕಿ ಅಥವಾ ಧಾನ್ಯ, ಮೆಕ್ಕೆಜೋಳ, ಜೈವಿಕ ಕೃಷಿತ್ಯಾಜ್ಯ, ಅಥವಾ ಕಾರ್ಬೋಹೈಡ್ರೇಟ್ ಜಾಸ್ತಿ ಇರುವ ಯಾವುದೇ ಸಾವಯವ ಪದಾರ್ಥಗಳನ್ನು ಕೊಳೆಯಿಸಿ ಕೂಡ ಇದನ್ನು ಉತ್ಪಾದಿಸುತ್ತಾರೆ. ಈ ಹುದುಗುವಿಕೆ ಅಥವಾ ಕಿಣ್ವನ ಪ್ರಕ್ರಿಯೆಯನ್ನು- ನೀರು ಹಾಗೂ ಸೂಕ್ಷ್ಮಜೀವಿಗಳೆಂಬ ಜೈವಿಕ ಕತ್ತರಿಯ ಸಹಾಯದಿಂದ ಸೂಕ್ತ ಉಷ್ಣತೆ ಹಾಗೂ ವಾತಾವರಣದಲ್ಲಿ ಸಂಕೀರ್ಣ ಅಣುಗಳನ್ನು ನಿರ್ದಿಷ್ಟ ಚಿಕ್ಕ ಚಿಕ್ಕ ಅಣುಗಳನ್ನಾಗಿ ಕತ್ತರಿಸುವ ಕ್ರಿಯೆ ಎನ್ನಬಹುದು.

ಎಥೆನಾಲ್ ಅಥವಾ ಮದ್ಯ(ಆಲ್ಕೋಹಾಲ್) ಉತ್ಪಾದನೆ ಅನಾದಿ ಕಾಲದಿಂದಲೂ ಪರಿಚಿತವಿದ್ದ ಸಂಗತಿ. ಆದರೆ ಇದನ್ನು ಇಂಧನವಾಗಿ ಎಂಜಿನ್‌ದಲ್ಲಿ ಬಳಸಬಹುದೆಂದು ಮೊದಲು ತೋರಿದಾತ- 1876ರಲ್ಲಿ ಪೆಟ್ರೋಲ್ ಎಂಜಿನ್ ಆವಿಷ್ಕರಿಸಿದ ಜರ್ಮನಿಯ ನಿಕೋಲಾಸ್ ಒಟ್ಟೊ . ಅನಂತರ ಹೆನ್ರಿ ಫೋರ್ಡ್ 1908ರಲ್ಲಿ ಹೊರತಂದ ಮಾಡೆಲ್ -ಟಿ ಎಂಬ ಕಾರುಗಳನ್ನು ಪೆಟ್ರೋಲ್ ಅಥವಾ ಎಥೆನಾಲ್ ಬೆರೆಸಿದ ಪೆಟ್ರೋಲಿನಲ್ಲಿ ಚಲಾಯಿಸುವಂತೆ ಸಿದ್ಧಪಡಿಸಲಾಗಿತ್ತು. ಆದರೆ ಅನಂತರದ 20ನೇ ಶತಮಾನದ ಆರಂಭದ ಕಾಲದಲ್ಲಿ ನೈಸರ್ಗಿಕ ಪೆಟ್ರೋಲಿಯಂ ಸಾಕಷ್ಟು ಪ್ರಮಾಣದಲ್ಲಿ ದೊರೆತದ್ದರಿಂದ ಇಂಧನವಾಗಿ ಎಥೆನಾಲ್‌ನ ಬಳಕೆ ನಿಂತುಹೋಯ್ತು. ಇದನ್ನು ಮತ್ತೆ ಪರಿಚಯಿಸಿದ್ದು ಅತಿಹೆಚ್ಚು ಕಬ್ಬು ಬೆಳೆಯುತ್ತಿದ್ದ ಬ್ರೆಝಿಲ್ ದೇಶ. ಈಗ ಬ್ರೆಝಿಲ್ ದೇಶದಲ್ಲಿ ಇ-20, ಇ-85 ಹಾಗೂ ಇ-100 ಈ ಎಲ್ಲಾ ಪ್ರಕಾರದ ಮಿಶ್ರಇಂಧನ ಜನಸಾಮಾನ್ಯರ ಬಳಕೆಗೆ ಲಭ್ಯವಿದೆ. ಭಾರತದಲ್ಲಿ ಬಳಸುವ ಒಟ್ಟೂ ತೈಲ ಆಧಾರಿತ ಇಂಧನದಲ್ಲಿ 88.5 ಪ್ರತಿಶತದಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ!

ತಕ್ಕಮಟ್ಟಿಗಾದರೂ ಈ ಪರಾವಲಂಬಿ ಹೊರೆ ತನ್ಮೂಲಕ ವಿದೇಶಿ ವಿನಿಮಯ ತಗ್ಗಿಸುವ ಪ್ರಮುಖ ಉದ್ದೇಶದಿಂದ ಎಥೆನಾಲ್ ಮಿಶ್ರಿತ ಪೆಟ್ರೋಲ್ ಕಾರ್ಯಕ್ರಮವನ್ನು 2003ರಲ್ಲಿಯೇ ಭಾರತ ಸರಕಾರವು ಘೋಷಿಸಿತು. ಆದರೆ 2014ರಲ್ಲಿ ಇದಕ್ಕೆ ವಿಶೇಷ ಚಾಲನೆ ದೊರೆಯಿತು. ಇದು 1.5 ಪ್ರತಿಶತ ಮಿಶ್ರಣದಿಂದ ಆರಂಭವಾಗಿ, ಎಥೆನಾಲ್ ಉದ್ಯಮಕ್ಕೆ ಉತ್ತಮ ಪ್ರೋತ್ಸಾಹ ದೊರೆತು ಸಾಕಷ್ಟು ಉತ್ಪಾದನೆಯೂ ಆದ ಕಾರಣ ಈಗ 20 ಪ್ರತಿಶತಕ್ಕೆ ತಲುಪಿದ್ದಾಗಿದೆ. ದೇಶೀಯವಾಗಿ ಉತ್ಪಾದಿಸಲಾಗುವ ನವೀಕರಿಸಬಹುದಾದ ಇಂಧನವಾದ್ದರಿಂದ ಇದೊಂದು ಸ್ವಾವಲಂಬಿ ಹೆಜ್ಜೆಯಾಗಿ ಪ್ರಾಮುಖ್ಯತೆ ಪಡೆದಿದೆ.

ಎಥೆನಾಲ್ ಬಳಕೆಯ ಇನ್ನೊಂದು ಮುಖ್ಯ ವಿಷಯವೆಂದರೆ ಇದು ಪರಿಸರ ಸ್ನೇಹಿ. ಕಾರಣ ಪೆಟ್ರೋಲಿನ ಆಕ್ಟೇನ್ ಸಂಖ್ಯೆಗಿಂತ (91-95) ಎಥೆನಾಲ್ (108) ಹೆಚ್ಚಿರುವುದರಿಂದ ಇಂಜಿನ್ ನಾಕಿಂಗ್ ಸಮಸ್ಯೆ ಕಡಿಮೆಯಾಗುತ್ತದೆ (ನಾಕಿಂಗ್ ಎಂಬುದು ಪೆಟ್ರೋಲ್ ಎಂಜಿನ್‌ಗಳಲ್ಲಿ ಕಂಡು ಬರುವ ಎಂಜಿನ್‌ನ ದಕ್ಷತೆಯನ್ನು ಕುಗ್ಗಿಸುವ ಒಂದು ಸಮಸ್ಯೆ. ಇದು ಆಕ್ಟೇನ್ ನಂಬರ್ ಹೆಚ್ಚಿರುವ ಇಂಧನವನ್ನು ಬಳಸಿದಾಗ ಕಡಿಮೆ ಆಗುತ್ತದೆ.






ಉದಾಹರಣೆಗೆ ಬಂಕ್‌ಗಳಲ್ಲಿ ಹೆಚ್ಚಿನ ಬೆಲೆಗೆ ದೊರಕುವ ಪವರ್ ಪೆಟ್ರೋಲ್‌ನ ಆಕ್ಟೇನ್ ನಂಬರ್ ಹೆಚ್ಚಿರುತ್ತದೆ). ಜೊತೆಗೆ ಎಥೆನಾಲ್ ಅಣುವಿನಲ್ಲಿಯೆ ಆಕ್ಸಿಜನ್ ಪರಮಾಣುವೂ ಇರುವುದರಿಂದ ಒಟ್ಟಾರೆ ಈ ಮಿಶ್ರಇಂಧನವು ದಕ್ಷದಹನವಾಗಿ ತ್ಯಾಜ್ಯ ಅನಿಲದಲ್ಲಿ ಕಾರ್ಬನ್ ಮೊನಾಕ್ಸೈಡ್ ಹಾಗೂ ಹೈಡ್ರೋಕಾರ್ಬನ್ ಕಣಗಳ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ ಇದು ದೇಶಾದ್ಯಂತ ವಾಯುಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ.

ಎಲ್ಲವೂ ಪ್ರಯೋಜನಕಾರಿಯೇ ಆಗಿದ್ದರೆ ಇ-20ಯಿಂದ ಯಾವ ವಿವಾದವಾಗಲಿ, ಅದರ ಕುರಿತು ವಿಶೇಷ ಚರ್ಚೆಯಾಗಲಿ ಆಗುತ್ತಿರಲಿಲ್ಲ. ಆದರೆ ಈ ಮಿಶ್ರಣದಲ್ಲಿ ಕೆಲವು ನ್ಯೂನತೆಗಳೂ ಇರುವುದರಿಂದ ದೇಶಾದ್ಯಂತ ಚರ್ಚೆಯ ಬಿಸಿ ಏರಿದೆ. ಮೊದಲನೆಯದಾಗಿ ಮುಂಚೆ ಹೇಳಿದಂತೆ ವಾಹನದ ಮೈಲೇಜು ಕಡಿಮೆ ಆಗಿರುವುದು.

ದಕ್ಷದಹನವಾದ ಮೇಲೆ, ಮೈಲೇಜು ಹೆಚ್ಚಾಗಬೇಕಿತ್ತಲ್ಲವೆ? ಇಲ್ಲ, ಎಥೆನಾಲಿನ ಇಂಧನ ಸಾಂದ್ರತೆ/ ಸಾಮರ್ಥ್ಯ ಪೆಟ್ರೋಲಿಗಿಂತ ಕಡಿಮೆ. ಪೆಟ್ರೋಲಿನದು 34 ಮೆಗಾ ಜೋಲ್ಸ್ ಪ್ರತಿ ಲೀಟರ್‌ಗೆ ಆದರೆ ಎಥೆನಾಲ್ ಲೀಟರ್‌ಗೆ 21 ಮೆಗಾ ಜೋಲ್ ಶಕ್ತಿಯನ್ನು ಮಾತ್ರ ನೀಡುತ್ತದೆ. ಆದ್ದರಿಂದ ವಾಹನದ ಮೈಲೇಜಿನಲ್ಲಿ ಕೊಂಚ ಇಳಿಕೆ ಸಹಜ. ಪೆಟ್ರೋಲ್ ಒಂದು ಏಕೈಕ ರಾಸಾಯನಿಕ ಸಂಯುಕ್ತವಲ್ಲ. ಭೂಮಿಯ ಆಳದಲ್ಲಿ ದೊರೆತ ಕಚ್ಚಾತೈಲವನ್ನು ಸಂಸ್ಕರಣೆ ಮಾಡುವುದರ ಮೂಲಕ ಪಡೆಯಲಾಗುತ್ತದೆ.

ಸಾಮಾನ್ಯವಾಗಿ 4 ರಿಂದ 12 ಕಾರ್ಬನ್ ಪರಮಾಣುಗಳನ್ನು ( 412) ಒಳಗೊಂಡಿರುವ ವಿವಿಧ ಹೈಡ್ರೋಕಾರ್ಬನ್‌ಗಳ ಎಚ್ಚರಿಕೆಯಿಂದ ಮಾಡಿದ ಒಂದು ಸಂಯೋಜನೆಯೆ- ಪೆಟ್ರೋಲ್. ಎಥೆನಾಲಿಗೆ ಹೋಲಿಸಿದರೆ ಪೆಟ್ರೋಲಿನಲ್ಲಿ ದಹಿಸಬಲ್ಲ ಹೆಚ್ಚು ಕಾರ್ಬನ್ ಹಾಗೂ ಹೈಡ್ರೋಜನ್ ಪರಮಾಣುಗಳಿರುವುದರಿಂದ ಇದರ ಶಕ್ತಿ ಸಾಂದ್ರತೆ ಹೆಚ್ಚು.

ಇ-20ಯಲ್ಲಿ ಪೆಟ್ರೋಲಿಗಿಂತ ಕಡಿಮೆ ಶಕ್ತಿ ಸಾಂದ್ರತೆ ಹೊಂದಿರುವ ಎಥೆನಾಲ್ ಬೆರೆಸುವುದರಿಂದ ಇದರ ದಹನದಿಂದ ಬರುವ ಸರಾಸರಿ ಶಕ್ತಿ ಕಡಿಮೆ, ಆದ್ದರಿಂದ ವಾಹನದ ಮೈಲೇಜು ಕಡಿಮೆಯಾಗುತ್ತದೆ. ಇ-20ಯಿಂದ ಎಂಜಿನ್ನಿನ ಭಾಗಗಳು ಹಾಳಾಗುತ್ತವೆ ಎಂಬ ಆರೋಪವಿದೆ. ಇದನ್ನು ತಿಳಿಯಲು ಎಥೆನಾಲ್ ಹಾಗೂ ಪೆಟ್ರೋಲಿನ ಭೌತಿಕ ಲಕ್ಷಣದ ಅರಿವು ಅಗತ್ಯ. ಮುಂಚೆ ಹೇಳಿದಂತೆ ಪೆಟ್ರೋಲ್ ವಿವಿಧ ಹೈಡ್ರೋಕಾರ್ಬನ್‌ಗಳ ಒಂದು ಸಂಯೋಜನೆ. ಆದರೆ ಇವೆಲ್ಲವೂ ನೀರನ್ನು ದ್ವೇಷಿಸುವ ಹೈಡ್ರೋಫೋಬಿಕ್ ಗುಣ ಹೊಂದಿವೆ. ಅಂದರೆ ಹೇಗೆ ಎಣ್ಣೆ ನೀರಿನೊಂದಿಗೆ ಬೆರೆಯದೊ, ಹಾಗೆಯೆ ಪೆಟ್ರೋಲ್ ಕೂಡ ನೀರಿನಲ್ಲಿ ಸೇರದು. ಆದರೆ ಎಥೆನಾಲ್ ಹಾಗಲ್ಲ, ಅದು ಹೈಡ್ರೋಫಿಲಿಕ್, ಅಂದರೆ ನೀರಿನಲ್ಲಿ ಸರಾಗವಾಗಿ ವಿಲೀನವಾಗಬಲ್ಲದು.

ಇದರಲ್ಲಿರುವ - ಒಹೆಚ್ ಬಂಧವೇ ಇದಕ್ಕೆ ಕಾರಣ. ಆದರೆ ಎಥೆನಾಲಿನ ವಿಶೇಷವೆಂದರೆ ಈ ಒಂದೇ ಸಂಯುಕ್ತದಲ್ಲಿ ಪೆಟ್ರೋಲು ಅಥವಾ ಎಣ್ಣೆಯಲ್ಲಿ ಕರಗಬಲ್ಲ ಹೈಡ್ರೋಫೋಬಿಕ್ ಆದ ಹೈಡ್ರೋ ಕಾರ್ಬನ್ ಭಾಗ ( 25 ), ಹಾಗೂ ನೀರಿನಲ್ಲಿ ವಿಲೀನವಾಗಬಲ್ಲ ಹೈಡ್ರೋಫಿಲಿಕ್ ಭಾಗ ಎರಡೂ ಇವೆ! ಆದ್ದರಿಂದ ಇದು ಪೆಟ್ರೋಲಿನಲ್ಲಿ ಸರಾಗವಾಗಿ ಬೆರೆತರೂ ನೀರಿನ ಆಸೆ ತೊರೆದಿಲ್ಲ!

**- ಗಣೇಶ್** ಎಸ್.ಹೆಗಡೆ



# ಟೀಕೆ ಮಾಡುವುದು ಸುಲಭ, ತಿದ್ದುವುದು ಕಷ್ಟ

ಒಬ್ಬ ಕಲಾವಿದ ತನ್ನ ಕುಂಚದಿಂದ ಒಂದು ಚಿತ್ರ ಬರೆದನು. ಜನರು ಆ ಚಿತ್ರದ ಬಗ್ಗೆ ಏನು ಹೇಳುತ್ತಾರೆ ಎಂಬ ಕುತೂಹಲದಿಂದ, ಅವನು ಚಿತ್ರವನ್ನು ಒಂದು ಮೇಜಿನ ಮೇಲೆ ಇಟ್ಟು ಪಕ್ಕದಲ್ಲಿ ಒಂದು ಚೀಟಿ ಬರೆದನು:

ತುಂಬಾ ಇಷ್ಟದಿಂದ ಈ ಚಿತ್ರವನ್ನು ಬರೆದಿದ್ದೇನೆ. ಇದರಲ್ಲಿ ಏನಾದರೂ ತಪ್ಪು ಅಥವಾ ಕೊರತೆ ಕಂಡರೆ ಇಲ್ಲಿರುವ ಪೆನ್‌ನಿಂದ ಗುರುತು ಮಾಡಿ.

ಸಂಜೆ ಬಂದು ನೋಡಿದಾಗ, ಚಿತ್ರದ ತುಂಬಾ ಗುರುತುಗಳೇ ತುಂಬಿದ್ದವು. ಅದನ್ನು ನೋಡಿ ಅವನು ತುಂಬಾ ನೊಂದು ತನ್ನ ಗುರುವಿನ ಬಳಿಗೆ ಹೋಗಿ, ಗುರುಗಳೇ, ನಾನು ಒಳ್ಳೆಯ ಕಲಾವಿದನಾಗಲಿಲ್ಲ ಎಂದು ಚಿತ್ರ ತೋರಿಸಿದ.

ಗುರು ಮಂದಹಾಸ ಬೀರಿ ಹೇಳಿದರು: ಈ ಚಿತ್ರವನ್ನು ಮತ್ತೆ ಬರೆ. ಆದರೆ ಈ ಬಾರಿ ಹೀಗೆ ಬರೆ:

ಈ ಚಿತ್ರದಲ್ಲಿ ಏನಾದರೂ ಕೊರತೆ ಕಂಡರೆ, ಇಲ್ಲಿರುವ ಕುಂಚ ಮತ್ತು ಬಣ್ಣಗಳನ್ನು ಬಳಸಿ ಅದನ್ನು ತಿದ್ದಿ.

ಮರುದಿನ ಶಿಷ್ಯನಿಗೆ ಆಶ್ಚರ್ಯ ಕಾದಿತ್ತು. ಚಿತ್ರ ಹೇಗಿತ್ತೋ ಹಾಗೆಯೇ ಇತ್ತು; ಯಾರೂ ಯಾವುದನ್ನೂ ತಿದ್ದಿರಲಿಲ್ಲ.

ತಪ್ಪುಗಳನ್ನು ಎತ್ತಿ ತೋರಿಸುವವರು ಅನೇಕರಿರುತ್ತಾರೆ; ಆದರೆ ಅವನ್ನು ತಿದ್ದಲು ಬೇಕಾದ ಜ್ಞಾನ, ನಿಪುಣತೆ ಮತ್ತು ಹೊಣೆಗಾರಿಕೆ ಹೊಂದಿರುವವರು ವಿರಳ.

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಸುಮ್ಮನೆ ಕುಳಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವವರು ಲಕ್ಷಾಂತರ ಜನ ಸಿಗುತ್ತಾರೆ, ಆದರೆ ನಿಜವಾದ ಬದಲಾವಣೆ ತರಲು ಶ್ರಮಿಸುವವರು ಯಾರೂ ಇಲ್ಲ!

ಇಂದು ಒಂದಿಬ್ಬರ ವಾಟ್ಸಾಪ್ ಸ್ಟೇಟಸ್‌ನಲ್ಲಿ ಬಂದ ಒಂದು ವೀಡಿಯೊ ನೋಡಿದಾಗ ಈ ಕಥೆ ನೆನಪಾಯಿತು. ಅದಕ್ಕೇ ಇದನ್ನು ಬರೆಯಬೇಕೆನಿಸಿತು.

# ಗೆಳೆತನ

ಕಾಲೇಜು ಜೀವನದಲ್ಲಿ ನಾವು ಯಾರನ್ನೂ ಆಯ್ಕೆ ಮಾಡಿಕೊಳ್ಳಲಿಲ್ಲ. ಆದರೆ ಜೀವನವೇ ಕೆಲವರನ್ನು ನಮ್ಮ ಬಳಿ ತಂದು ನಿಲ್ಲಿಸಿತ್ತು. ಒಂದೇ ಬೆಂಚು... ಒಂದೇ ಕನಸು... ಒಂದೇ ನಗು... ಒಂದೇ ನೋವು... ಅವರಿಲ್ಲದೆ ಬದುಕೇ ಇಲ್ಲ ಎನ್ನುವಷ್ಟು ಹತ್ತಿರವಾಗಿದ್ದೆವು. ನಮ್ಮಲ್ಲಿ ಒಬ್ಬನು ದಾರಿ ತಪ್ಪಿದ.

ಅವನನ್ನು ಕಳೆದುಕೊಳ್ಳಲು ಮನಸ್ಸಿರಲಿಲ್ಲ. ಅದಕ್ಕಾಗಿ ಅವನ ತಪ್ಪನ್ನು ಸರಿಯೆಂದು ಹೇಳಲಿಲ್ಲ. ಹಿಂದಿರುಗು... ಎಂದು ಕೈ ಚಾಚಿದೆವು. ಆದರೆ ಅವನು ನಮ್ಮ ಕೈ ಹಿಡಿಯಲಿಲ್ಲ. ಬದಲಿಗೆ... ನಮ್ಮನ್ನೇ ಬಿಟ್ಟು ಹೋದ. ಕಾಲ ಯಾರಿಗಾಗಿ ನಿಲ್ಲುವುದಿಲ್ಲ. ವರ್ಷಗಳು ಉರುಳಿದವು. ಇಂದು ಅವನ ಮೊಬೈಲ್ ಪರದೆಯ ಮೇಲೆ ಪ್ರತಿದಿನ ಗೆಳೆತನದ ಬಗ್ಗೆ ದೊಡ್ಡ ದೊಡ್ಡ ಮಾತುಗಳು ಕಾಣಿಸುತ್ತವೆ. ಗೆಳೆಯರೇ ನಿಜವಾದ ಸಂಪತ್ತು... ಗೆಳೆತನ ಎಂದಿಗೂ ಸಾಯುವುದಿಲ್ಲ... ಎಂದು ಬರೆಯುವ ಪ್ರತಿಯೊಂದು ಸಾಲಿನ ಕೆಳಗೆ ಸಾವಿರಾರು ಮೆಚ್ಚುಗೆಗಳು. ಆದರೆ...

ಆ ಬರಹಗಳನ್ನು ಓದುವಾಗ ನನಗೆ ಅವನ ಪದಗಳು ಕಾಣುವುದಿಲ್ಲ. ಒಮ್ಮೆ ಅವನಿಗಾಗಿ ಕಾದಿದ್ದ ನಮ್ಮ ಕಣ್ಣುಗಳು ಮಾತ್ರ ನೆನಪಾಗುತ್ತವೆ. ಈಗಲೂ ಅತನ ತಪ್ಪನ್ನ ಒಪ್ಪಿದವರು ಮಾತ್ರ ಆತನ ಬಳಗದ ಜೊತೆ ಇದ್ದಾರೆ. ತನ್ನೊಳಗಿನ ತಪ್ಪಿನ ಅರಿವಿದ್ದರೂ ಉಳಿದವರಿಗೆ ಬದುಕಿನಪಾಠ ಹೇಳುವಾಗ ಅಸಹ್ಯ ಅನ್ನಿಸುತ್ತೆ ಸರ್ ಇದಕ್ಕೆ ಏನು ಮಾಡೋದು ನವೀನ ಪ್ರಶ್ನೆಗಳನ್ನ ಮುಂದಿಟ್ಟ.. ಉತ್ತರವಿರಲಿಲ್ಲ ನನ್ನಲ್ಲಿ ಅದಕ್ಕೆ ನಿಮ್ಮಿಂದ ಉತ್ತರದ ಬೇಡಿಕೆ

**- ಧೀರಜ್** ಬೆಳ್ಳಾರೆ



# ನಕಲಿ ಬಿಲ್ ಮಾಡುವವರನ್ನು ಬಡಿದು ಹಾಕುವೆ

## ಭ್ರಷ್ಟಾಚಾರ ವಿಚಾರದಲ್ಲಿ ರಾಜಿ ಇಲ್ಲ | ಸರ್ಕಾರಿ ನೌಕರರಿಗೆ ಡಿ.ಕೆ.ಶಿವಕುಮಾರ್ ಎಚ್ಚರಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಭ್ರಷ್ಟಾಚಾರ ವಿಚಾರದಲ್ಲಿ ರಾಜಿ ಇಲ್ಲ, ಡಬಲ್ ಬಿಲ್, ನಕಲಿ ಬಿಲ್ ಮಾಡುವವರನ್ನು ಬಡಿದು ಹಾಕುವೆ ಎಂದು ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರು ಸರ್ಕಾರಿ ನೌಕರರಿಗೆ ಎಚ್ಚರಿಕೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಸರ್ಕಾರಿ ನೌಕರರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರ ವಿಚಾರದಲ್ಲಿ ನಾನು ರಾಜಿ ಇಲ್ಲ. ಅಧಿಕಾರಿಗಳ ಪ್ರತಿ ಹೆಜ್ಜೆ ಪರಿಶೀಲಿಸುತ್ತೇನೆ. ಪ್ರತಿ ಫಲಾನುಭವಿ ಮಾಹಿತಿ ಇಟ್ಟುಕೊಳ್ಳ ಬೇಕು. ಅವರು ಅದನ್ನು ಹೇಗೆ ಬಳಸುತ್ತಿದ್ದಾರೆಂದು ನೋಡಬೇಕು. ನಮ್ಮಲ್ಲಿ ಡಬಲ್ ಬಿಲ್ ಮಾಡುವ ಕೆಲಸ ಮಾಡುತ್ತಿದ್ದಾರೆ. ನಾನು ಅಂತಹವರನ್ನು ಬಡಿದು ಹಾಕುತ್ತೇನೆ. ನಕಲಿ ಬಿಲ್‌ಗಳಿಗೆ ಅವಕಾಶ ಇಲ್ಲ. ದಾಖಲೆ ತಿದ್ದುವುದಕ್ಕೆ ಬ್ರೇಕ್ ಹಾಕಲು ಆಸ್ತಿ ದಾಖಲೆ ಡಿಜಿಟಲೀಕರಣ ಮಾಡಲಾಗುತ್ತಿದೆಂದು ಹೇಳಿದರು.

ಪ್ರತಿ ತಾಲ್ಲೂಕು ಅಧಿಕಾರಿಗಳು ತಮ್ಮ ದಿನದ ಕಾರ್ಯಕ್ರಮದ ವಿವರ ಹಿರಿಯ ಅಧಿಕಾರಿ ಗಳಿಗೆ ನೀಡಬೇಕು. ಸಹಕಾರ, ಕಂದಾಯ ಅಧಿಕಾರಿಗಳಿಗೆ ನ್ಯಾಯ ನೀಡುವ ಅಧಿಕಾರ ಇರುತ್ತದೆ. ನ್ಯಾಯ ಪೀಠದಿಂದ ಅನ್ಯಾಯ ಆಗಬಾರದು. ಯಾರ ಒತ್ತಡಕ್ಕೂ ಮಣಿಯದೆ ಕೆಲಸ ಮಾಡಿ. ವಿಧಾನಸಭೆ ಆದ ಮೇಲೆ ಪ್ರತಿ ತಾಲ್ಲೂಕಿಗೂ ನಾನು ಭೇಟಿ ನೀಡುತ್ತೇನೆ. ಖಾಸಗಿ ಶಾಲೆಗಳು ಸೇರಿ ಎಲ್ಲಾ ಶಾಲೆಗಳು ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ನಾನು ಸೇರಿ ಮಂತ್ರಿ ಮಂಡಲ, ಅಧಿಕಾರಿಗಳು ಎಲ್ಲರೂ ಸರ್ಕಾರಿ ನೌಕರರು. ನಮ್ಮದು ಟೀಮ್ ಕರ್ನಾಟಕ. ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಕಲ್ಯಾಣ ಮಾಡುವುದೇ ನಮ್ಮ ಗುರಿ. ನಮ್ಮನ್ನು ಸೇರಿ ರಾಜ್ಯದ ಜನರ ಸೇವೆ ಮಾಡುವ ಅವಕಾಶ ಸಿಕ್ಕಿರುವುದು 5.50 ಲಕ್ಷ ಸರ್ಕಾರಿ ನೌಕರರಿಗೆ ಮಾತ್ರ. ನಾವು ನಮಗೆ ಸಿಕ್ಕ ಅವಕಾಶ ಬಳಸಿಕೊಳ್ಳಬೇಕು ಎಂದರು.

ಅಂಬೇಡ್ಕರ್ ಅವರು ಇತಿಹಾಸ ಮರೆತವ ಇತಿಹಾಸ ಸೃಷ್ಟಿಸಲಾರ ಎಂದು ಹೇಳಿದ್ದಾರೆ. ನೀವು ಸಾಕಷ್ಟು ವಿದ್ಯೆ, ಅನುಭವ ಹೊಂದಿದ್ದೀರಿ. ನಾನು ಹೆಚ್ಚು ಓದಿಲ್ಲ, ಜಿಲ್ಲಾ ಪಂಚಾಯಿತಿ ಸದಸ್ಯನಾಗಿ, ಶಾಸಕ, ಮಂತ್ರಿ, ಉಪಮುಖ್ಯಮಂತ್ರಿಯಾಗಿ ಅನುಭವ ಇದೆ. ನೀವು ಶ್ರಮಜೀವಿ, ಸರ್ಕಾರದ ನಾಡಿ ಮಿಡಿತ ಇಟ್ಟುಕೊಂಡು, ಜನ ಮತ್ತು ಸರ್ಕಾರದ ಸೇತುವೆಯಾಗಿದ್ದೀರಿ. ನಾವು ಅಧಿಕಾರದಲ್ಲಿದ್ದಾಗ ಯಾವ ಸಾಕ್ಷಿಗುಡ್ಡೆ ಬಿಟ್ಟು ಹೋಗುತ್ತೇವೆಂಬುದು ಮುಖ್ಯ ಎಂದರು.

**ಕಾನೂನು ಚೌಕಟ್ಟಿನಲ್ಲಿ ಜನರ ಸಮಸ್ಯೆಗೆ ಸ್ಪಂದಿಸಿ**

ಸರ್ಕಾರ ನೌಕರರ ಸಂಘದವರು ಗ್ಯಾರಂಟಿ ಯೋಜನೆ ತ್ಯಜಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಅವರಿಗೆ ಅಭಿನಂದನೆಗಳು. ಪ್ರತಿ ತಾಲ್ಲೂಕಿನಲ್ಲಿ ಎಲ್ಲಾ ಅಧಿಕಾರಿಗಳು ಅಲ್ಲೇ ವಾಸ ಇರಬೇಕು. ಇಂದು 750 ಕಡೆ ಸಭೆ ಕಾರ್ಯಕ್ರಮ ನಡೆಯುತ್ತಿದೆ. ರಾಜ್ಯದ ಪ್ರಮುಖ ನೌಕರನಾಗಿ ಸರ್ಕಾರದ ಚಿಂತನೆ, ಮುಂದಿನ ದಿನಗಳಲ್ಲಿ ಸಾಗಬೇಕಾದ ದಾರಿ ಬಗ್ಗೆ ಮಾರ್ಗದರ್ಶನ ನೀಡಲು ಬಂದಿರುವೆ. ಮನಸ್ಸು ಶುದ್ಧವಾಗಿ, ಪಾರದರ್ಶಕವಾಗಿ ಕೆಲಸ ಮಾಡಿದರೆ ಸಮಸ್ಯೆಗೆ ಪರಿಹಾರ ನೀಡಬಹುದೆಂದು ಹೇಳಿದರು.



**2 ವಾರಕ್ಕೊಮ್ಮೆ ತಾಲ್ಲೂಕಿಗೆ ಹೋಗಿ**

ಪ್ರಜಾಸೇವೆ ಇಲಾಖೆ ಮೂಲಕ ಜಿಲ್ಲಾ ಮಂತ್ರಿ, ಶಾಸಕರು 2 ವಾರಕ್ಕೆ ಒಮ್ಮೆ ತಾಲ್ಲೂಕಿಗೆ ಹೋಗಿ ಪ್ರಜಾಸೇವೆ ಕೆಲಸ ಮಾಡಬೇಕು. ತಿಂಗಳ ಮೊದಲ ಹಾಗೂ ಮೂರನೇ ಶನಿವಾರ. ನಂತರ ಪಂಚಾಯಿತಿ ಮಟ್ಟದಲ್ಲಿ ಮಾಡಬೇಕು. ಶಾಸಕರು ಹೋಬಳಿ ಮಟ್ಟದಲ್ಲಿ ಮಾಡಬೇಕು. ಜನರ ಸಂಕಷ್ಟಕ್ಕೆ ಕಾನೂನು ಚೌಕಟ್ಟಿನಲ್ಲಿ ಸಹಾಯ ಮಾಡಿ. ನೀವು ಕೇಂದ್ರ ಸ್ಥಳದಲ್ಲಿದ್ದು, ಅಲ್ಲಿನ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಬೇಕು. ಆಗ ವಾಸ್ತವ ಪರಿಸ್ಥಿತಿ ಅರಿಯ ಬಹುದೆಂದು ತಿಳಿಸಿದರು.

**ಆತ್ಮಸಾಕ್ಷಿಗೆ ಒಪ್ಪುವಂತೆ ಕೆಲಸ ಮಾಡಿ**

ನಮ್ಮಲ್ಲಿರುವ ಶಿಕ್ಷಣ, ಆರೋಗ್ಯ ಸೌಲಭ್ಯ ಬೇರೆ ಎಲ್ಲೂ ಇಲ್ಲ. ನಾನು ನನ್ನ ಮೇಲೆ ಕಣ್ಣು ಇಟ್ಟು ಕೊಂಡಿದ್ದೇನೆ. ತಾಲ್ಲೂಕು ಮಟ್ಟದಲ್ಲಿ ಅಧಿಕಾರಿ ಗಳು ಹಾಗು ಶಾಸಕರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದು ಪರಿಶೀಲನೆ ಮಾಡುತ್ತೇವೆ. ನಾವು ಕೆಲಸ ಮಾಡುವುದೇ ಜನರಿಗಾಗಿ. ಬೇರೆಯವರಿಗೆ ಒಪ್ಪಿಸದಿದ್ದರೂ ನಿಮ್ಮ ಆತ್ಮಸಾಕ್ಷಿಗೆ ಒಪ್ಪುವಂತೆ ಕೆಲಸ ಮಾಡಿ ಎಂದು ಡಿಕೆಶಿ ತಿಳಿಸಿದರು.

# ಸೋಮವಾರ ಸರ್ಕಾರಕ್ಕೆ ಬರ ಅಧ್ಯಯನ ವರದಿ

» ಮೊದಲನೇ ಪುಟದಿಂದ

ಗಳು ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಾಜರಾಗಬೇಕು. ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿಲ್ಲ, ಎಷ್ಟು ಬೆಳೆ ನಾಶವಾಗಿದೆ. ಕುಡಿಯುವ ನೀರಿನ ಸಮಸ್ಯೆ, ಜಾನುವಾರುಗಳಿಗೆ ಮೇವಿನ ಅಗತ್ಯ ಎಷ್ಟಿದೆ ಹಾಗು ಬೆಳೆ ನಷ್ಟದ ವಿವರ ಸಂಗ್ರಹಿಸಿ ವರದಿ ಸಿದ್ಧಪಡಿಸಬೇಕೆಂದು ಹೇಳಿದ್ದೇನೆ. ಜಿಲ್ಲೆಯ ಬರ ಪರಿಸ್ಥಿತಿ ವರದಿಯನ್ನು ಸೋಮವಾರ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು. ಬಳಿಕ ಕೇಂದ್ರಕ್ಕೆ ಸಲ್ಲಿಸಿ ಬರ ಘೋಷಣೆ ಹಾಗು ಪರಿಹಾರಕ್ಕೆ ಆಗ್ರಹಿಸಲಾಗುವುದೆಂದರು.

ತಾಲ್ಲೂಕಿನಲ್ಲಿ ಮಳೆ ಕೊರತೆಯಿಂದ ವಿವಿಧ ಬೆಳೆ ಒಣಗುತ್ತಿರುವ ಹಿನ್ನಲೆಯಲ್ಲಿ ರೈತರಿಗೆ ಬೆಳೆ ವಿಮೆ ಹಾಗು ಬರ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕೆಂದರು.

**ತಾಲ್ಲೂಕಿನಲ್ಲಿ ಶೇ. 4ರಷ್ಟು ಬಿತ್ತನೆ**

ರಾಗಿ ತಾಲ್ಲೂಕಿನ ಪ್ರಮುಖ ಬೆಳೆ. ಮಳೆ ಕೊರತೆಯಿಂದ ಬಹುತೇಕ ಕಡೆ ಬಿತ್ತನೆಯಾದ ಬೆಳೆಯೂ ಒಣಗುತ್ತಿದೆ. ಕೇವಲ ಶೇ.4ರಷ್ಟು ಮಾತ್ರ ಬಿತ್ತನೆಯಾಗಿದ್ದು, ಅದೂ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆಯಾಗಿಲ್ಲ. ಜಿಲ್ಲೆಯಾದ್ಯಂತ ಶೇ.32ರಷ್ಟು ಮಾತ್ರ ಬಿತ್ತನೆಯಾಗಿದ್ದು, ಬಿತ್ತನೆಯಾದ



ಪ್ರದೇಶದಲ್ಲಿಯೂ ಬೆಳೆ ಹಾನಿಯಾಗಿದೆ ಎಂದು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು. ರೈತರು ರಾಗಿ ಸೇರಿ ಬೆಳೆಗಳಿಗೆ ಕಡ್ಡಾಯವಾಗಿ ಬೆಳೆ ವಿಮೆ ಮಾಡಿಸಿಕೊಳ್ಳಬೇಕು. ಬೆಳೆ ಬಿತ್ತನೆ ವಿಫಲವಾದಾಗ ವಿಮಾ ಯೋಜನೆಯ ನಿಯಮಾನುಸಾರ ಪರಿಹಾರ ಪಡೆಯಲು ಅವಕಾಶವಿದೆ. ವಿಮೆ ಮಾಡಿಸಿಕೊಳ್ಳದ ರೈತರನ್ನು ಗುರುತಿಸಿ, ಗ್ರಾಮ ಗ್ರಾಮಕ್ಕೆ ತೆರಳಿ ಅರಿವು ಮೂಡಿಸಿ ನೋಂದಣಿ ಮಾಡಿಸಬೇಕೆಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನಲ್ಲಿ ಸುಮಾರು 60 ಸಾವಿರ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ತರುವ ಗುರಿ ಇದ್ದು, ಈಗಾಗಲೇ 40 ಸಾವಿರ ರೈತರ ನೋಂದಣಿ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಪ್ರತಿಕ್ರಿಯಿಸಿದ ಸಚಿವರು, ಶೇ.100 ರಷ್ಟು ಗುರಿ ತಲುಪಬೇಕು. ಕೆಲವೇ ದಿನಗಳು ಬಾಕಿ ಇರುವುದರಿಂದ ಅಧಿಕಾರಿಗಳು ಶ್ರಮವಹಿಸಿ ಎಲ್ಲಾ ಅರ್ಹ ರೈತರಿಗೂ ವಿಮೆ ಮಾಡಿಸಬೇಕೆಂದರು.

ಬೆಳೆ ವಿಮೆ ರೈತರಿಗೆ ಸಂಕಷ್ಟದ ಸಂದರ್ಭದಲ್ಲಿ ಆಧಾರವಾಗಲಿದೆ. ನಂತರ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಅರ್ಹ ಪರಿಹಾರ ಒದಗಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು. ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಮತ್ತು ರೈತರಿಗೆ ಪರಿಹಾರ ಈ ಮೂರು ವಿಷಯಗಳಿಗೆ ಮೊದಲ ಆದ್ಯತೆ ನೀಡಬೇಕು. ಜಿಲ್ಲೆಯ 36 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಮಾಹಿತಿ ಇದ್ದು, ಸಂಬಂಧಪಟ್ಟ ಗ್ರಾಮಗಳನ್ನು ಗುರುತಿಸಿ, ಪಂಚಾಯಿತಿವಾರು ನಿಖರ ವರದಿ ಸಿದ್ಧಪಡಿಸಬೇಕು. ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿ, ಬೋರ್‌ವೆಲ್‌ಗಳ ಸ್ಥಿತಿ, ಮರು ಕೊಳವೆಬಾವಿ ಕೊರೆಯುವ ಅಗತ್ಯ, ನೀರಿನ ಟ್ಯಾಂಕ್‌ಗಳ ಸಮಸ್ಯೆ ಸೇರಿ ಎಲ್ಲಾ ವಿವರಗಳನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿ ವರದಿ ನೀಡಬೇಕೆಂದರು.

ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ಸರ್ಕಾರದಿಂದ ಲಭ್ಯವಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ತುರ್ತು ಕ್ರಮ ಕೈಗೊಳ್ಳಬೇಕು. ಜನರಿಗೆ ಪ್ರತಿದಿನದ ಬಳಕೆಗೆ ಅಗತ್ಯವಿರುವ ನೀರು ದೊರೆಯುವಂತೆ ಅಧಿಕಾರಿ ಗಳು ಕ್ರಮ ವಹಿಸಬೇಕು ಎಂದರು.

**ಸ್ಥಳೀಯ ಜೋಳಕ್ಕೆ ಆದ್ಯತೆ**

ಜಿಲ್ಲೆಯಲ್ಲಿ ಜೋಳದ ಬೆಳೆಗೂ ಹಾನಿಯಾಗಿರುವ ಹಿನ್ನಲೆ ಮುಂದಿನ ದಿನಗಳಲ್ಲಿ ಸ್ಥಳೀಯವಾಗಿ ಬೆಳೆಯುವ ಜೋಳವನ್ನು ರೈತರಿಂದ ನೇರವಾಗಿ ಖರೀದಿಸಿ, ಜಿಲ್ಲೆಯಲ್ಲಿಯೇ ಪಶು ಆಹಾರ ತಯಾರಿಕೆಗೆ ಬಳಸುವ ಕುರಿತು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ತಹಶೀಲ್ದಾರ್ ಸಂತೋಷ್ ಕುಮಾರ್ ಮೊದಲಾದವರಿದ್ದರು.

## ಹೊಸ ರೈಲು ಸಂಚಾರ, ಟಿಕೆಟ್ ದರ ಪರಿಷ್ಕರಣೆಗೆ ಬೇಡಿಕೆ

» ಮೊದಲನೇ ಪುಟದಿಂದ

ಹಾಗು ಸುತ್ತಮುತ್ತಲಿನ ಗ್ರಾಮಗಳ ಜನರು ಈ ಪ್ರದೇಶಕ್ಕೆ ಪ್ರತಿದಿನ ಆಗಮಿಸುತ್ತಾರೆ. ಸೂಕ್ತ ಎಕ್ಸ್‌ಪ್ರೆಸ್, ಸೂಪರ್ ಫಾಸ್ಟ್, ಪ್ರಯಾಣಿಕ ರೈಲುಗಳಿಗೆ ನಿಲುಗಡೆ ಎರಡೂ ದಿಕ್ಕುಗಳಲ್ಲಿ ನಿಯಮಿತ ವಾಣಿಜ್ಯ ನಿಲುಗಡೆ ನೀಡಲು ರೈಲ್ವೆ ಇಲಾಖೆ ತಕ್ಷಣ ಕಾರ್ಯಯೋಜನೆ ರೂಪಿಸಬೇಕೆಂದು ಒತ್ತಾಯಿಸಿದ್ದಾರೆ.

ರೈಲು ಸಂಖ್ಯೆ 16595/ 16596 ಪಂಚಗಂಗಾ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಕರ ಬೇಡಿಕೆ ಹೆಚ್ಚಾಗಿದೆ. ಕಾಯ್ದಿರಿಸಿದ ಟಿಕೆಟ್‌ಗಳ ಬೇಡಿಕೆಯನ್ನು ಪರಿಗಣಿಸಿ ಹೆಚ್ಚುವರಿ ಬೋಗಿ, ಆಸನ ಸಾಮರ್ಥ್ಯವನ್ನು ಒದಗಿಸಬೇಕು. ದೀರ್ಘಕಾಲಿಕ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಶಾಶ್ವತ ಪರಿಹಾರ ಕಲ್ಪಿಸಬೇಕು. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಪಟ್ಟಣವಾಗಿದ್ದು, ಸುತ್ತಮುತ್ತಲಿನ ಗ್ರಾಮಗಳ ಜನರೂ ರೈಲು ಸೇವೆಗಳನ್ನು ಅವಲಂಬಿಸಿದ್ದಾರೆ. ಪ್ರಯಾಣಿಕರ ಅನುಕೂಲಕ್ಕಾಗಿ ರೈಲ್ವೆ ರಿಸರ್ವೇಶನ್, ಬುಕಿಂಗ್ ಕಚೇರಿ ಅಥವಾ ಸೂಕ್ತ ಕಾಯ್ದಿರಿಸುವಿಕೆ ಸೌಲಭ್ಯವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಪ್ರಯಾಣಿಕರ ಬೇಡಿಕೆ ಆಧರಿಸಿ ಹಾಸನ ಭಾಗಕ್ಕೆ ಸೇವೆ ನೀಡುವ ಪ್ರಮುಖ ರೈಲುಗಳಲ್ಲಿ ಹೆಚ್ಚುವರಿ ಬೋಗಿಗಳನ್ನು ಒದಗಿಸಬೇಕು. ವಿಶೇಷವಾಗಿ 16575/ 16576 ಗೋಮಟೇಶ್ವರ ಎಕ್ಸ್‌ಪ್ರೆಸ್, 16515/ 16516 ಕಾರವಾರ ಎಕ್ಸ್‌ಪ್ರೆಸ್, 16511/ 16512, ಬೆಂಗಳೂರು-ಕಣ್ಣೂರು ಎಕ್ಸ್‌ಪ್ರೆಸ್ 16595/16596-ಪಂಚಗಂಗಾ ಎಕ್ಸ್‌ಪ್ರೆಸ್, ಈ ರೈಲುಗಳಲ್ಲಿನ ಕಾಯ್ದಿರಿಸುವಿಕೆ ಹಾಗು ಸಾಮಾನ್ಯ ವರ್ಗದ ಪ್ರಯಾಣಿಕರ ಬೇಡಿಕೆ ಪರಿಶೀಲಿಸಿ ಅಗತ್ಯ ಸಾಮರ್ಥ್ಯ ಹೆಚ್ಚಿಸಬೇಕೆಂದು ವಿನಂತಿಸಿದ್ದಾರೆ.

ಹಾಸನ ಮತ್ತು ಸುತ್ತಮುತ್ತಲಿನ ಪ್ರದೇಶದ ಜನರಿಗೆ ಮುಂಬೈಗೆ ನೇರ ರೈಲು ಸಂಪರ್ಕದ ಅಗತ್ಯವಿದ್ದು, ಬೆಂಗಳೂರು- ತುಮಕೂರು- ಶ್ರವಣಬೆಳಗೊಳ-ಹಾಸನ- ಅರಸೀಕೆರೆ ಮಾರ್ಗವಾಗಿ ಮುಂಬೈಗೆ ಹೊಸ ರೈಲು ಸೇವೆ ಆರಂಭಿಸುವ ಸಾಧ್ಯತೆ ಪರಿಶೀಲಿಸಬೇಕು. ಜೊತೆಗೆ ಕರಾವಳಿ ಕರ್ನಾಟಕ, ಹಾಸನ, ಬೆಂಗಳೂರು ಹಾಗು ತಮಿಳುನಾಡಿನ ನಡುವೆ ನೇರ ರೈಲು ಸಂಪರ್ಕವನ್ನು ಮತ್ತಷ್ಟು ಬಲಪಡಿಸಲು ಮಂಗಳೂರು-ಹಾಸನ-ಬೆಂಗಳೂರು-ಚೆನ್ನೈ ಮಾರ್ಗದಲ್ಲಿ ಹೊಸ ರೈಲು ಸೇವೆಯನ್ನು ಆರಂಭಿಸುವ ಸಾಧ್ಯತೆ ಪರಿಶೀಲಿಸಬೇಕೆಂದು ಕೋರಿದ್ದಾರೆ.

ಈ ಎಲ್ಲಾ ಬೇಡಿಕೆಗಳನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ, ರೈಲ್ವೆ ಮಂಡಳಿ ಹಾಗು ನೈರುತ್ಯ ರೈಲ್ವೆಗೆ ಅಗತ್ಯ ನಿರ್ದೇಶನ ನೀಡಿ, ಸಾಧ್ಯವಿರುವ ಬೇಡಿಕೆಗಳ ಕುರಿತು ಶೀಘ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

## ಕುಸ್ತಿಪಟು ಸುಶೀಲ್ ಕುಮಾರ್ ಜಾಮೀನು ಅರ್ಜಿ ತಿರಸ್ಕೃತ

• ಪ್ರಜೋದಯ ವರದಿ



**ನವದೆಹಲಿ:** ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಒಲಿಂಪಿಯನ್ ಸುಶೀಲ್ ಕುಮಾರ್ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಆಗಸ್ಟ್ 6ರಂದು ಸುಶೀಲ್ ಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಅವರು ತಿರಸ್ಕರಿಸಿದರು. ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಯಿರುವ ಕಾರಣ ಸುಪ್ರೀಂ ಕೋರ್ಟ್ ಅವರ ಅರ್ಜಿಯನ್ನು ಈ ಹಿಂದೆ ತಳ್ಳಿಹಾಕಿ ರುವುದು, ಬಂಧನಕ್ಕೆ ಮೊದಲು ಅವರ ವರ್ತನೆ, ಅಪರಾಧದ ತೀವ್ರತೆ ಮೊದಲಾದ ಅಂಶಗಳನ್ನು ಗಮನ ದಲ್ಲಿರಿಸಿ ಜಾಮೀನು ನಿರಾಕರಿಸುವ ಆದೇಶ ನೀಡಿದರು.

ದೆಹಲಿ ಪೊಲೀಸರು ಮತ್ತು ದೂರುದಾರ ಧನಕರ್ ಅವರ ತಂದೆ ಜಾಮೀನು ಅರ್ಜಿಯನ್ನು ವಿರೋಧಿಸಿದ್ದರು.

## ಬರದಿಂದ ಬದುಕುಳಿಯಲು ರೈತರು ಬೆಳೆ ವಿಮೆ ಮೊರೆ

» ಮೊದಲನೇ ಪುಟದಿಂದ

**ವಿಮೆ ರೈತನಿಗೆ ಆರ್ಥಿಕ ಕವಚ**

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ

ನಾಲ್ಕನೇ ಪುಟದಉದ್ದೇಶವೇ ಬೆಳೆ ವಿಫಲತೆ ಅಥವಾ ಪ್ರಕೃತಿ ವಿಕೋಪದಿಂದ ಉಂಟಾಗುವ ನಷ್ಟದ ಸಂದರ್ಭದಲ್ಲಿ ರೈತರ ಆದಾಯವನ್ನು ಸ್ಥಿರಗೊಳಿಸುವುದಾಗಿದೆ. ಆಹಾರ ಧಾನ್ಯ, ಸಿರಿಧಾನ್ಯ ಬೆಳೆಗಳಿಗೆ ರೈತರು ಪಾವತಿಸಬೇಕಾದ ಗರಿಷ್ಠ ವಿಮಾ ಕಂತು ವಿಮಾ ಮೊತ್ತದ ಶೇ.2 ರಷ್ಟಿದೆ. ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳಿಗೆ ಗರಿಷ್ಠ ಶೇ.5ರಷ್ಟು ಕಂತು ನಿಗದಿಯಾಗಿದೆ.

ಬೆಳೆ ವಿಮೆಯ ವ್ಯಾಪ್ತಿ ಕೇವಲ ಪರಿಹಾರ ಪಡೆಯುವ ವ್ಯವಸ್ಥೆಯಾಗಿ ಉಳಿಯದೆ, ಹವಾಮಾನ ಬದಲಾವಣೆಯ ಅನಿಶ್ಚಿತತೆಯ ನಡುವೆ ರೈತನಿಗೆ ಒಂದು ರೀತಿಯ ಆರ್ಥಿಕ ಸುರಕ್ಷಾ ಕವಚವಾ ಗಬೇಕಿದೆ.

**ವಿಮೆಯ ಮೊತ್ತದಷ್ಟೇ ಪರಿಹಾರವೂ ಮುಖ್ಯ**

ಜಿಲ್ಲೆಯಲ್ಲಿ 1.48 ಲಕ್ಷ ರೈತರು ವಿಮೆಯ ಮೊರೆ ಹೋಗಿರುವುದು ಆಶಾದಾಯಕ ಬೆಳವಣಿಗೆಯಾದರೂ, ಬೆಳೆ ವಿಮೆ ಮಾಡಿದ ರೈತರಿಗೆ ನಷ್ಟವಾದ ಸಂದರ್ಭದಲ್ಲಿ ಸಮರ್ಪಕ ಪರಿಹಾರ ಸಕಾಲದಲ್ಲಿ ತಲುಪುತ್ತದೆಯೇ ಎಂಬ ಪ್ರಶ್ನೆ ಇದೀಗ ಎದುರಾಗಿದೆ. ಹವಾಮಾನ ಏರುಪೇರು ಗಳಿಂದ ಬೆಳೆ ನಷ್ಟವೂ ತಾಲ್ಲೂಕಿನಿಂದ ತಾಲ್ಲೂಕಿಗೆ ಬದಲಾಗುತ್ತದೆ. ಆದ್ದರಿಂದ ಬೆಳೆ ವಿಮೆ ಮಾಡಿದ ರೈತರ ಬೆಳೆ ಹಾನಿಯನ್ನು ವೈಜ್ಞಾನಿಕವಾಗಿ ದಾಖಲಿಸಿ, ಅರ್ಹ ರೈತರಿಗೆ ಪರಿಹಾರ ತ್ವರಿತವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕಿದೆ.

## ಕಾವೇರಿ ನೀರು ಹಂಚಿಕೆ: ಕರ್ನಾಟಕಕ್ಕೆ ಮತ್ತೆ ಹಿನ್ನಡೆ

» ಮೊದಲನೇ ಪುಟದಿಂದ

**ಪರಿಸ್ಥಿತಿ ಪರಿಶೀಲಿಸಿದ ನಂತರ ನಿರ್ಧಾರ**

ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತಿಕ್ರಿಯಿಸಿ, ರಾಜ್ಯದ ರೈತರನ್ನು ರಕ್ಷಿಸುವ ಕರ್ತವ್ಯ ಮತ್ತು ನ್ಯಾಯಾಲಯದ ಆದೇಶಗಳನ್ನು ಪಾಲಿಸುವ ಕರ್ತವ್ಯ ತಮ್ಮ ಮೇಲಿದೆ. ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಸರ್ಕಾರ ಈ ಬಗ್ಗೆ ನಿರ್ಧರಿಸುತ್ತದೆ ಎಂದು ಹೇಳಿದರು.

ನೀರಾವರಿ ಸಚಿವ ರಾಮಲಿಂಗಾರೆಡ್ಡಿ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಈ ವಿಷಯವನ್ನು ಚರ್ಚಿಸುವುದಾಗಿ ಹೇಳಿದ ಅವರು, ರೈತರು ಮತ್ತು ಸಾರ್ವಜನಿಕರು ತಾಳ್ಮೆಯಿಂದ ಇರಬೇಕು. ನಮ್ಮ ಪರಿಸ್ಥಿತಿಯನ್ನು ಪರಿಗಣಿಸಿ, ನಮ್ಮ ರೈತರನ್ನು ರಕ್ಷಿಸುವ ಕರ್ತವ್ಯ ನನಗಿದೆ. ನಾವು ರೈತರನ್ನು ರಕ್ಷಿಸಬೇಕು ಮತ್ತು ನ್ಯಾಯಾಲಯದ ಆದೇಶಗಳನ್ನು ಸಹ ಪಾಲಿಸಬೇಕು. ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವಿದೆ ಎಂದು ಹೇಳಿದರು.

## ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ

» ಮೊದಲನೇ ಪುಟದಿಂದ

ಸರ್ಕಾರದಿಂದ ರೈತರ ಖಾತೆಗೆ ಜಮೆಯಾಗುವ ಪರಿಹಾರ ಹಾಗು ನೆರವಿನ ಹಣವನ್ನು ಬ್ಯಾಂಕ್‌ಗಳು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ. ನೆರವಿನ ಹಣವನ್ನು ಸಾಲಕ್ಕೆ ಕಡಿತಗೊಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು. ಖಾಸಗಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಹಾಗು ಬ್ಯಾಂಕ್‌ಗಳ ಬಲವಂತದ ಸಾಲ ವಸೂಲಾತಿಗೆ ತಡೆ ಹಾಕಬೇಕು. ಕೃಷಿ ಹಾಗೂ ಹೈನುಗಾರಿಕೆಗಾಗಿ ರೈತರು ಪಡೆದಿರುವ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು ಒತ್ತಾಯಿಸಿದರು.

ಜಾನುವಾರುಗಳಿಗೆ ಉಚಿತ ಮೇವು ಹಾಗು ಪಶು ಆಹಾರ ವಿತರಿಸಬೇಕು. ಉಳಿದಿರುವ ಬೆಳೆಗಳನ್ನು ರಕ್ಷಿಸಿಕೊಳ್ಳಲು ಹಗಲು ವೇಳೆಯಲ್ಲಿ ಕನಿಷ್ಠ ಎಂಟು ಗಂಟೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು. ಹಾಳಾಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಉಚಿತವಾಗಿ ಬದಲಾಯಿಸಬೇಕೆಂದು ಆಗ್ರಹಿಸಿದರು.

ರೈತ ಮುಖಂಡ ಕೆ.ಟಿ.ಗಂಗಾಧರ್ ಅವರು ಮಾತನಾಡಿ, ಎಲ್ಲಾ ರೈತರ ಬೆಳೆ ವಿಮೆ ಪ್ರೀಮಿಯಂ ಅನ್ನು ಸರ್ಕಾರವೇ ಭರಿಸಬೇಕು. ಗ್ರಾಮ ಮಟ್ಟದಲ್ಲಿ ಬೆಳೆ ವಿಮೆ ನೋಂದಣಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸದಿರುವುದರಿಂದ ಅನೇಕ ರೈತರಿಗೆ ವಿಮೆ ಮಾಡಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಬೆಳೆ ವಿಮೆ ನೋಂದಣಿ ಅವಧಿ ವಿಸ್ತರಿಸಬೇಕೆಂದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಬಿಟ್ಟಗೌಡನಹಳ್ಳಿ ಮಂಜು, ಸುರೇಶ್, ಕಾರ್ಯದರ್ಶಿ ಪಾಲಾಕ್ಷ, ಸಂದೇಶ್, ಮಲ್ಲೇಶ್ ಸೇರಿ ನೂರಾರು ರೈತರು ಪಾಲ್ಗೊಂಡಿದ್ದರು.

**ರೈತರೊಂದಿಗೆ ಪೊಲೀಸರ ವಾಗ್ವಾದ**

ನಗರದ ತಣ್ಣೀರುಹಳ್ಳದಿಂದ ಟ್ರ್ಯಾಕ್ಟರ್ ಹಾಗು ಎತ್ತಿನಗಾಡಿಗಳಲ್ಲಿ ಹೊರಟ ಪ್ರತಿಭಟನಾ ಮೆರವಣಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಕೆಲ ಸಮಯ ಘೋಷಣೆ ಕೂಗಿ ಅಲ್ಲಿಂದ ಬಿ.ಎಂ. ರಸ್ತೆ ಮೂಲಕ ಎನ್.ಆರ್.ವೃತ್ತಕ್ಕೆ ಬಂದು ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ನಂತರ ಜಿಲ್ಲಾಧಿಕಾರಿ ಕಚೇರಿಯತ್ತ ತೆರಳಿದ ರೈತರನ್ನು ಮುಖ್ಯದ್ವಾರದಲ್ಲೇ ಪೊಲೀಸರು ತಡೆದ ಹಿನ್ನಲೆಯಲ್ಲಿ ಕೆಲಕಾಲ ವಾಗ್ವಾದ ನಡೆಯಿತು. ಬಳಿಕ ರೈತರು ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲೇ ಪ್ರತಿಭಟನೆಗೆ ಕುಳಿತು ಘೋಷಣೆಗಳನ್ನು ಕೂಗಿದರು.

## ಬೀಟಮ್ಮ 1 ಗುಂಪಿನ ಹೆಣ್ಣಾನೆಗೆ ರೇಡಿಯೋ ಕಾಲರ್

» ಮೊದಲನೇ ಪುಟದಿಂದ

ಅರಣ್ಯ ಇಲಾಖೆ ಅಧಿಕಾರಿಗಳನ್ನು ತಡೆದು ನಮ್ಮ ತೋಟಕ್ಕೆ ಕಾಡಾನೆಗಳು ಆಹಾರ ಅರಸಿ ಬಂದಿವೆ. ಕಾಡಾನೆಗಳು ಆಹಾರ ತಿಂದು ಹೋಗಲಿ. ಅವುಗಳಿಗೆ ಸುಮ್ಮನೆ ತೊಂದರೆ ಕೊಡುವುದು ಬೇಡವೆಂದು ತಗಾದೆ ತೆಗೆದರು. ಎಷ್ಟೇ ಮನವೊಲಿಕೆಗೆ ಪ್ರಯತ್ನಿಸಿದರೂ ರಾಯ್ ಅವರು ಕಾರ್ಯಾಚರಣೆಗೆ ಅನುಮತಿ ನೀಡಲಿಲ್ಲ. ಹೀಗಾಗಿ ಅಧಿಕಾರಿಗಳು ಸಾಕಾನೆಗಳೊಂದಿಗೆ ನಿಂತಲ್ಲಿಯೇ ನಿಲ್ಲಬೇಕಾಯಿತು. ಮಧ್ಯಾಹ್ನದ ಬಳಿಕ ಆನೆಗಳು ಜಾವಿದ್ ಎಂಬುವವರ ತೋಟ ಪ್ರವೇಶಿಸಿದ ಬಳಿಕ ಕಾರ್ಯಾಚರಣೆ ಪ್ರಾರಂಭಿಸಲಾಯಿತು.

ಅರಣ್ಯ ಇಲಾಖೆ ಆದೇಶದಂತೆ ಎರಡು ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿದ್ದು, ಇನ್ನು ಕೆಪಿ 2 ಕಾಲರ್ ಹೆಸರಿನ ಕಾಡಾನೆ ಸೆರೆಗೆ ಕ್ರಮ ವಹಿಸಲಾಗಿದೆ. ಈ ಕಾರ್ಯಾಚರಣೆಗಾಗಿ ಮಹೇಂದ್ರ, ಹೆಸರಿನ ಕುಮ್ಕಿ ಆನೆಯನ್ನು ಕರೆಸಿಕೊಳ್ಳಲಾಗಿದೆ. ಬುಧವಾರ ಕಾಡಾನೆ ಸೆರೆ ಕಾರ್ಯಾಚರಣೆ ನಡೆಯಲಿದೆ.

## ಸಿರಿಯಾದ ಮಾಜಿ ಅಧ್ಯಕ್ಷ ಬಶರ್‌ಗೆ ಮರಣದಂಡನೆ

ಡಮಸ್ಕಸ್: ಸಿರಿಯಾದ ಮಾಜಿ ಅಧ್ಯಕ್ಷ ಬಶರ್ ಅಲ್ ಅಸಾದ್ ಹಾಗೂ ಅವರ ಕಿರಿಯ ಸಹೋದರನಿಗೆ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ.

14 ವರ್ಷ ನಡೆದ ಸಿರಿಯಾ ಆಂತರ್ಯುದ್ಧದ ವೇಳೆ ಮಾನವತೆಯ ವಿರುದ್ಧದ ಅಪರಾಧಗಳು ಹಾಗೂ ಯುದ್ಧ ಅಪರಾಧದ ಆರೋಪದಲ್ಲಿ ಅವರಿಗೆ ಈ ಶಿಕ್ಷೆ ವಿಧಿಸಲಾಗಿದೆ. ಯುದ್ಧದಿಂದಾಗಿ 5 ಲಕ್ಷದಷ್ಟು ಜನ ಮೃತಪಟ್ಟಿದ್ದರು.

ಡಮಸ್ಕಸ್‌ನ ನಾಲ್ಕನೇ ಅಪರಾಧ ನ್ಯಾಯಾಲಯವು ಈ ತೀರ್ಪು ನೀಡಿದೆ. ಸುಮಾರು 50 ವರ್ಷಗಳು ಬಶರ್ ಅವರ ಕುಟುಂಬ ಸಿರಿಯಾವನ್ನು ಆಳ್ವಿಕೆ ನಡೆಸಿತ್ತು. 20 ತಿಂಗಳ ಹಿಂದಷ್ಟೇ ಬಶರ್ ಅಧಿಕಾರ ಕಳೆದುಕೊಂಡಿದ್ದರು.

ದೇಶದ ಸಂಸ್ಥೆಗಳನ್ನು ಬಳಸಿ ಬಶರ್ ಯುದ್ಧಾಪರಾದ ಹಾಗೂ ಮಾನವತೆಯ ವಿರುದ್ಧ ಅಪರಾಧ ಎಸಗಿದ್ದಾರೆಂದು ನ್ಯಾಯಾಧೀಶ ಫಕ್ರುದ್ದೀನ್ ಅಲ್‌ಅರ್ಯಾನ್ ಅವರು ತೀರ್ಪಿನ ವೇಳೆ ಹೇಳಿದ್ದಾರೆ. ತೀರ್ಪು ಓದುವ



ದೃಶ್ಯಗಳು ಸರ್ಕಾರಿ ಮಾಧ್ಯಮಗಳಲ್ಲಿ ಪ್ರಸಾರ ಮಾಡಲಾಗಿತ್ತು.

ಅಸಾದ್ ಅವರ ತಾಯಿಯ ಸೋದರ ಸಂಬಂಧಿ ಆತಿಫ್ ನಜೀಬ್‌ಗೂ ಮರಣದಂಡನೆ ವಿಧಿಸಲಾಗಿದೆ. ದಕ್ಷಿಣ ಪ್ರಾಂತ್ಯವಾದ ದರಾದಲ್ಲಿ ನಡೆದ ದಮನಕಾರಿ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದ ಆರೋಪದಲ್ಲಿ ಅವರನ್ನು ದೋಷಿ ಎಂದು ಕೋರ್ಟ್ ಘೋಷಿಸಿದೆ. ಅವರ ಈ ಕಾರ್ಯಾಚರಣೆಯೇ ಬಳಿಕ ಬಂಡಾಯ ಮತ್ತು ಅಂತರ್ಯುದ್ಧಕ್ಕೆ ಕಾರಣವಾಗಿತ್ತು. ನಜೀಬ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬಹುದೆಂದು ಅಲ್ ಅರ್ಯಾನ್ ತಿಳಿಸಿದ್ದಾರೆ.

ನ್ಯಾಯಾಧೀಶರು ತೀರ್ಪು ಓದುವ ವೇಳೆ, ಜೈಲಿನ ಸಮವಸ್ತ್ರ ಧರಿಸಿದ್ದ ನಜೀಬ್ ಕಟಕಟೆ ಯಲ್ಲಿ ನಿಂತಿದ್ದರು. ಭಾರಿ ಬಂದೋಬಸ್ತ್ ಕೂಡ ಇತ್ತು. ತೀರ್ಪಿನ ಬಗ್ಗೆ ತಿಳಿದುಕೊಳ್ಳಲು ಸಾವಿರಾರು ಮಂದಿ ಡಮಸ್ಕಸ್‌ನ ಹೃದಯ ಭಾಗದಲ್ಲಿರುವ ಕೋರ್ಟ್‌ನ ಹೊರಗಡೆ ಸೇರಿದ್ದರು.

2024ರಲ್ಲಿ ಅಧಿಕಾರ ಪತನಗೊಂಡ ಬಳಿಕ ಅಸಾದ್ ಹಾಗೂ ಅವರ ಸಹೋದರ ಮಹೆರ್ ರಷ್ಯಾಕ್ಕೆ ಪಲಾಯನ ಮಾಡಿ ಆಶ್ರಯ ಪಡೆದಿದ್ದಾರೆ. ಅವರನ್ನು ಒಪ್ಪಿಸಬೇಕೆಂದು ಸಿರಿಯಾದ ಹೊಸ ಆಡಳಿತಗಾರರು ರಷ್ಯಾವನ್ನು ಒತ್ತಾಯಿಸಿದ್ದಾರೆ.

ನಜೀಬ್ ಅವರು ಅಸಾದ್ ಆಡಳಿತದ ಉನ್ನತ ಶ್ರೇಣಿಯ ಭದ್ರತಾ ಅಧಿಕಾರಿಗಳಲ್ಲಿ ಒಬ್ಬರಾಗಿದ್ದರು. ಸೇನೆಯ ಮಾಜಿ ಬ್ರಿಗೇಡಿಯರ್ ಜನರಲ್ ಆಗಿದ್ದ ಅವರು, 2011ರಲ್ಲಿ ಅಸಾದ್ ಆಡಳಿತದ ಅವಧಿಯಲ್ಲಿ ದಕ್ಷಿಣ ಸಿರಿಯಾದ ದರಾದಲ್ಲಿ ರಾಜಕೀಯ ಭದ್ರತಾ ವಿಭಾಗದ ಮುಖ್ಯಸ್ಥರಾಗಿದ್ದರು.

## ನಾಯಕತ್ವ ಗುಣ ಬೆಳೆಸಿಕೊಳ್ಳಲು ಕ್ರೀಡಾಕೂಟ ಸಹಕಾರಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಯುವಕರು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ನಾಯಕತ್ವದ ಗುಣ ಬೆಳೆಸಿಕೊಳ್ಳಬಹುದೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ತಿಳಿಸಿದರು.

ತಾಲ್ಲೂಕಿನ ಗೋವಿನಕೆರೆ ಗ್ರಾಮದಲ್ಲಿ ಎಂ.ಶಿವರ ವೃತ್ತ ಕದಂಬ ಪ್ರೀಮಿಯರ್ ಲೀಗ್ 1.0 ಮೊದಲನೇ ವರ್ಷದ ಸಿಎನ್‌ಬಿ ಕಪ್-10 ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಕ್ರಿಕೆಟ್ ಆಟದಿಂದ ಮಾನಸಿಕ ಒತ್ತಡ ಕಡಿಮೆಯಾಗಿ ಮನಸ್ಸಿಗೆ ಆನಂದ ಉಂಟು ಮಾಡುತ್ತದೆ. ದಿನನಿತ್ಯ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಆರೋಗ್ಯ ವೃದ್ಧಿಯಾಗುವುದರ ಜೊತೆಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಕ್ರಿಕೆಟ್‌ನಿಂದ ಶಿಸ್ತು, ಧೈರ್ಯ ಸಮಯ ನಿರ್ವಹಣೆಯ ಬಗ್ಗೆ ಯುವಕರಲ್ಲಿ ತಿಳವಳಿಕೆ ಹೆಚ್ಚಾಗುತ್ತದೆಂದರು.



ಭಾರತ 1983ರಲ್ಲಿ ಕಪಿಲ್ ದೇವ್ ನಾಯಕತ್ವದಲ್ಲಿ ಮೊದಲ ಬಾರಿಗೆ ವಿಶ್ವಕಪ್ ಗೆದ್ದಿತು. ಸುನಿಲ್ ಗವಾಸ್ಕರ್, ವಿಶ್ವನಾಥ್ ತರುವಾಯ ಭಾರತದಲ್ಲಿ ಕ್ರಿಕೆಟ್ ಪ್ರಸಿದ್ಧಿ ಪಡೆಯಿತು. ಈಗ ಬಿಸಿಸಿಐ ವಿಶ್ವದ ಶ್ರೀಮಂತ ಸಂಸ್ಥೆಯಾಗಿದೆ. 2027ರಲ್ಲಿ ಭಾರತ ವಿಶ್ವಕಪ್ ಗೆಲ್ಲುವ ಯುವಕರ ತಂಡವಾಗಿದೆ ಎಂದರು.

ಬಾಗೂರು ಹೋಬಳಿಯ ಕೆರೆಗಳಿಗೆ ಕಳೆದ ವರ್ಷ ಹೇಮಾವತಿ ನದಿ ನೀರು ತುಂಬಿಸಿದ್ದರಿಂದ ಅಂತರ್ಜಲ ವೃದ್ಧಿಯಾಗಿದೆ. ರೈತರು ತಮ್ಮ ತೆಂಗು ಬೆಳೆ ಉಳಿಸಿಕೊಳ್ಳಲು ನೆರವಾಗಿದೆ. ಅದರಿಂದ 4 ತಿಂಗಳು ಕೊಳವೆ ಬಾವಿಗಳ ನೀರು ಬತ್ತುವುದಿಲ್ಲ ಎಂದರು.

ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎಂ.ಆರ್.ಅನಿಲ್ ಕುಮಾರ್ ಅವರು ಮಾತನಾಡಿ, ಕಲ್ಲೇ ಸೋಮನಹಳ್ಳಿ ಏತ ನೀರಾವರಿ ಯೋಜನೆ ಮೂಲಕ ಈ ಭಾಗದ ಕೆರೆಗಳಿಗೆ ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಮಾವತಿ ನದಿ ನೀರು ಹರಿಸಿರುವುದರಿಂದ ಭಾಗದಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಿದೆ. 13 ವರ್ಷಗಳಿಂದ ಬಾಗೂರು ಹೋಬಳಿ ಸಮಗ್ರ ಅಭಿವೃದ್ಧಿಗೆ ಶಾಸಕರು ಶ್ರಮಿಸಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಹೆಚ್. ಶಿವಣ್ಣ, ವಿ.ಎನ್.ಮಂಜುನಾಥ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮರಿದೇವೇಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಬಸವರಾಜ್, ಮುಖಂಡರಾದ ಕುಂಬಾರಳ್ಳಿ ರಮೇಶ್, ನೆಟ್ಟೆಕೆರೆ ನಾಗರಾಜ್, ಬಿ.ಕೆ. ಮನು, ಎಸ್.ಡಿ.ಪುರುಷೋತ್ತಮ್, ಗೋವಿನಕೆರೆ ರಾಮಚಂದ್ರ, ರಮೇಶ್, ಭೂದೇಶ್, ವಕೀಲ ಧರಣೇಶ್, ಕದಂಬ ಪ್ರೀಮಿಯರ್ ಲೀಗ್‌ನ ಸದಸ್ಯರಾದ ಕಾಮನಹಳ್ಳಿ ರವಿಶಂಕರ್ ಮತ್ತಿತರರಿದ್ದರು.

## ಎಸ್.ಜಾನಕಿ ಅವರಿಗೆ ಗೀತ ನಮನ

• ಪ್ರಜೋದಯ ವರದಿ



**ಬಾಣಾವರ:** ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಗಾಯಕಿ ದಿ|| ಎಸ್.ಜಾನಕಿ ಅವರಿಗೆ ಗೀತ ನಮನ ಸಲ್ಲಿಸಲಾಯಿತ್ತು.

ಈ ಸಂದರ್ಭದಲ್ಲಿ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಪರಮೇಶ್ವರ್ ಅವರು ಎಸ್. ಜಾನಕಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರವಿಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ಪ್ರಾಂಶುಪಾಲ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜಾನಕಿ ಅವರ ಗೀತೆಗಳನ್ನು ಹಾಡಿ ಗೀತ ನಮನ ಸಲ್ಲಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಪತ್ರಕರ್ತರ ಸಂಘದ ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು ಅವರು ಮಾತನಾಡಿ, ಎಸ್.ಜಾನಕಿ ಅವರು ವಿಶ್ವ ಕಂಡ ಮಹಾನ್ ಗಾಯಕಿಯಾಗಿದ್ದು, ಸುಮಾರು 14 ಭಾಷೆಗಳಲ್ಲಿ ಸಾವಿರಾರು ಗೀತೆಗಳನ್ನು ಹಾಡುವ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆಂದು ಹೇಳಿದರು.

ಎಸ್.ಜಾನಕಿ ಅವರ ಸಾಧನೆಗೆ ಅವರೇ ಸಾಟಿ. ಅನ್ಯ ಭಾಷೆಗಳಲ್ಲಿ ಹಾಡಿದ್ದರೂ ಕನ್ನಡ ಭಾಷೆಯ ಬಗ್ಗೆ ಅಪಾರ ಗೌರವ ಮತ್ತು ಅಭಿಮಾನ ಹೊಂದಿದ್ದರು. ಕನ್ನಡ ನಾಡುನುಡಿ ಹಾಗು ಭಾಷೆಯ ಬಗ್ಗೆ ಹೆಚ್ಚಿನ ಪ್ರೀತಿ ಹೊಂದಿದ್ದ ಅವರು, ಬೇರೆ ರಾಜ್ಯದಲ್ಲಿ ಜನಿಸಿದರೂ ಕರ್ನಾಟಕದ ಲ್ಲಿಯೇ ತಮ್ಮ ಅಂತ್ಯಸಂಸ್ಕಾರ ನಡೆಯಬೇಕೆಂಬ ಮಹದಾಸೆ ಹೊಂದಿದ್ದರು. ಇಂತಹ ಮಹಾನ್ ಗಾಯಕಿಗೆ ಗೀತ ನಮನ ಸಲ್ಲಿಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದು ತಿಳಿಸಿದರು.

ಬಗರ್‌ಹುಕುಂ ಸಮಿತಿ ನಿರ್ದೇಶಕ ಬಿ.ಎಂ.ಜಯಣ್ಣ, ಕರವೇ ಗೌರವಾಧ್ಯಕ್ಷ ಬಿ.ಆರ್.ಲಕ್ಷ್ಮೀಶ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಪ್ಯಾರೂಸಾಹೇಬ್, ಪ್ರಾಚೀನ ಸ್ಮಾರಕ ಸಂರಕ್ಷಣಾ ಟ್ರಸ್ಟ್ ಅಧ್ಯಕ್ಷ ಬಿ.ಎಲ್.ಗೋಪಿ ಇದ್ದರು.

**ಎಐಡಿಎಸ್‌ಓ ನೇತೃತ್ವದಲ್ಲಿ ವಿವಿಧೆಡೆ ಸ್ಮರಣೆ**

# ಖುದಿರಾಮ್ ಬೋಸ್ ಯುವಜನತೆಗೆ ಸ್ಫೂರ್ತಿ

• ಪ್ರಜೋದಯ ವರದಿ

**ಹಾಸನ:** ಭಾರತ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಖುದಿರಾಮ್ ಬೋಸ್ ಅವರ ಸ್ಮರಣೆಯನ್ನು ಎಐಡಿಎಸ್‌ಓ ನೇತೃತ್ವದಲ್ಲಿ ನಗರದ ಮಹಾರಾಜ ಪಾರ್ಕ್ ಹಾಗು ವಿವಿಧ ಪ್ರೌಢ ಶಾಲೆಗಳಲ್ಲಿ ಆಚರಿಸಲಾಯಿತು.

ಈ ವೇಳೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ ಅವರು ಮಾತನಾಡಿ, ಕೇವಲ 18 ವರ್ಷ ವಯಸ್ಸಿನಲ್ಲಿಯೇ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ಖುದಿರಾಮ್ ಬೋಸ್ ಅವರ ಜೀವನ ಇಂದಿನ ಯುವಜನತೆಗೆ ಸ್ಫೂರ್ತಿಯಾಗಿದೆ. ಬ್ರಿಟೀಷರ ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ದೇಶಾದ್ಯಂತ ಹೋರಾಟಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಖುದಿರಾಮ್ ಬೋಸ್ ಅವರು ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸ್ವದೇಶಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಕರಪತ್ರಗಳನ್ನು ಹಂಚಿ ಜನರಲ್ಲಿ ದೇಶಪ್ರೇಮ ಮತ್ತು ಬ್ರಿಟೀಷ್ ವಿರೋಧಿ ಜಾಗೃತಿ ಮೂಡಿಸಿದರೆಂದು ಹೇಳಿದರು.

1905ರ ಬಂಗಾಳ ವಿಭಜನೆಯ ಸಂದರ್ಭದಲ್ಲಿ ದೇಶದಾದ್ಯಂತ ಸ್ವದೇಶಿ ಚಳುವಳಿ ಬಲಗೊಳ್ಳುತ್ತಿದ್ದಾಗ ಖುದಿರಾಮ್ ಬೋಸ್ ಅವರು ವಿದೇಶಿ ವಸ್ತುಗಳ ಬಹಿಷ್ಕಾರ ಹಾಗು ಜನರಲ್ಲಿ




ರಾಜಕೀಯ ಜಾಗೃತಿ ಮೂಡಿಸುವ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಬ್ರಿಟೀಷ್ ಅಧಿಕಾರಿಗಳ ದಮನಕಾರಿ ನೀತಿಗಳ ವಿರುದ್ಧ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಧೈರ್ಯ ದಿಂದ ಹೋರಾಡಿದರು ಎಂದರು.

ಬ್ರಿಟೀಷ್ ಅಧಿಕಾರಿ ಕಿಂಗ್ಸ್ ಫೋರ್ಡ್‌ನ ದಮನಕಾರಿ ಕ್ರಮಗಳ ವಿರುದ್ಧ ನಡೆದ ಹೋರಾಟದಲ್ಲಿ ಖುದಿರಾಮ್ ಬೋಸ್ ಮತ್ತು ಪ್ರಫುಲ್ಲ ಚಾಕಿ ಭಾಗವಹಿಸಿದರು. 1908ರಲ್ಲಿ ಮುಜಫರ್‌ಪುರದಲ್ಲಿ ನಡೆದ ಬಾಂಬ್ ದಾಳಿಯ ನಂತರ ಖುದಿರಾಮ್ ಬಂಧಿತರಾದರು. ವಿಚಾರಣೆಯ ಸಂದರ್ಭದಲ್ಲಿ ಬ್ರಿಟೀಷ್ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ, ಖುದಿರಾಮ್ ಬೋಸ್ ತಮ್ಮ ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಮರಣದಂಡನೆಯ ತೀರ್ಪು ಪ್ರಕಟವಾದಾಗಲೂ ಅವರು ನಗುನಗುತ್ತಲೇ ಅದನ್ನು ಸ್ವೀಕರಿಸಿದರು. 1908ರ ಆಗಸ್ಟ್ 11ರಂದು ಕೇವಲ 18 ವರ್ಷ ವಯಸ್ಸಿನ ಖುದಿರಾಮ್ ಬೋಸ್ ಗಲ್ಲುಗಂಬ ವನ್ನೇರಿದರು. ಅವರ ಈ ಅಪೂರ್ವ ಧೈರ್ಯ ಮತ್ತು ಬಲಿದಾನವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಯುವಕರಿಗೆ ಸ್ಫೂರ್ತಿ ನೀಡಿತು ಎಂದು ಹೇಳಿದರು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಜಿಲ್ಲಾ ಉಪಾಧ್ಯಕ್ಷರು ಅಭಿಷೇಕ್ ಮತ್ತು ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

## ದಲಿತರ ಮೇಲೆ ಸವರ್ಣೀಯರ ನಿರಂತರ ದ್ವೇಷ: ಆರೋಪ

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕಿನ ಕುರಿಕಾವಲು ಗ್ರಾಮದಲ್ಲಿ ನಾಲ್ವರು ಸವರ್ಣೀಯರು ತಮ್ಮ ವಿರುದ್ಧ ಜಾತಿ ನಿಂದನೆ, ಕೊಲೆ ಬೆದರಿಕೆ ಹಾಕಿದ್ದಾರೆ. ನ್ಯಾಯಕ್ಕಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಕ್ಕೆ ನಮ್ಮ ವಿರುದ್ಧ ಪ್ರತಿದೂರು ನೀಡಿದ್ದಾರೆಂದು ಗ್ರಾಮದ ಗೋವಿಂದ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಪರಿಶಿಷ್ಟ ಜಾತಿಗೆ ಸೇರಿದ ನಮ್ಮ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ನಮ್ಮ ಆಡು ಅವರ ಜಮೀನಿಗೆ ಅತಿಕ್ರಮ ಪ್ರವೇಶಿಸಿತು ಎಂಬ ಕಾರಣಕ್ಕೆ ಶೋಭಾರಾಣಿ, ಕಿರಣ, ನಿರ್ಮಲಾ, ಹೇಮಾಕ್ಷಿ ಹಾಗು ಪ್ರತಿಭಾ ಎಂಬುವವರು ನಮ್ಮ ತಾಯಿ ಮೀನಾಕ್ಷಿ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

ನಂತರ ಪೊಲೀಸ್ ಠಾಣೆಗೆ ದೂರು ನೀಡಿದ ಬಳಿಕ ಮಧ್ಯಾಹ್ನದ ವೇಳೆಗೆ ಮತ್ತೆ ಗ್ರಾಮಕ್ಕೆ ಬಂದ ಆರೋಪಿಗಳು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ. ಕಲ್ಲಿನಿಂದ ತಲೆಗೆ ಹೊಡೆದು, ಕಾಲಿನಿಂದ ತುಳಿದಿದ್ದಾರೆ. ಬಿಡಿಸಲು ಬಂದ ನನ್ನ




ಮೇಲೆ ದಾಳಿ ಮಾಡಿದ್ದಾರೆ. ಶೋಭಾರಾಣಿ ಎಂಬುವವರು ವಕೀಲರಾಗಿದ್ದು ತಮಗೆ ವಕೀಲರ ಸಂಘದ ಬೆಂಬಲ ಇರುವುದಾಗಿ ಹೇಳಿದ್ದಾರೆ. ಹೀಗಾದರೆ ಶೋಷಿತರು ಹೇಗೆ ಬದುಕಬೇಕೆಂದು ಪ್ರಶ್ನಿಸಿದರು.

ಇದೊಂದು ಘಟನೆಯಲ್ಲದೆ ಯಾವಾಗಲೂ ಸುಖಾ ಸುಮ್ಮನೆ ಜಗಳ ಮಾಡುತ್ತಾರೆ. ಪ್ರಶ್ನಿಸಿದರೆ ದಬ್ಬಾಳಿಕೆ ನಡೆಸುತ್ತಾರೆ. ಈ ಘಟನೆಗೆ ಸಂಬಂಧಿಸಿದ ಮೊಬೈಲ್ ಚಿತ್ರೀಕರಣಗಳು ತಮ್ಮ ಬಳಿ ಸಾಕ್ಷಿಯಾಗಿ ಇವೆ ಎಂದ ಅವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರ ರಕ್ಷಣೆಗೆ ಇರುವ ಅಟ್ರಾಸಿಟಿ ಕಾಯ್ದೆಯನ್ನು ಲಘುವಾಗಿ ಮಾತನಾಡಿ, ಜಾತಿ ನಿಂದನೆ ಹಾಗು ಬೆದರಿಕೆ ಹಾಕಿರುವ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಮ್ಮ, ದೇವರಾಜ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK